ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ

NIMMURU SUDDI

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

ಸಂಪಾದಕರು: ಸುಂದರ್

Editor : Sundar

Volume: 01, Issue: 78 RNI Number : KNKAN/25/A2770 27-03-2026 Friday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :78 ರಾಯಚೂರು 27-03-2026 ಶುಕ್ರವಾರ ಪುಟ 04 ಬೆಲೆ ರೂ.2/- ಮೊ:8660146563

ದಾಖಲೆ ಬಜೆಟ್ ಮಂಡನೆ ವಿಚಾರ : ವಿಧಾನಪರಿಷತ್‌ನಲ್ಲಿ ವಿಪಕ್ಷಗಳಿಗೆ ಸಿಎಂ ತಿರುಗೇಟು

ಬೆಂಗಳೂರು,ಮಾ.26- ನನಗೆ ಶಾಸಕರು, ವಿಧಾನಪರಿಷತ್ ಸದಸ್ಯರು, ರಾಜ್ಯದ ಜನತೆ ಪಕ್ಷದ ಹೈಕಮಾಂಡ್ ಬೆಂಬಲ ಇಲ್ಲದಿದ್ದರೆ ನಾನು ದಾಖಲೆಯ 17 ಬಜೆಟ್ ಮಂಡಿಸಲು ಹೇಗೆ ಸಾಧ್ಯವಾಗುತ್ತಿತ್ತು? ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಕ್ಷಗಳ ಆರೋಪಕ್ಕೆ ವಿಧಾನಪರಿಷತ್‌ನಲ್ಲಿಂದು ತಿರುಗೇಟು ನೀಡಿದರು.

ಬಜೆಟ್ ಮೇಲಿನ ಚರ್ಚೆಯಲ್ಲಿ ಉತ್ತರಿಸುವ ವೇಳೆ, ನೀವು ಮುಂದಿನ ಎರಡು ಬಜೆಟ್ ಮಂಡಿಸುವುದಾದರೆ ಮುಖ್ಯಮಂತ್ರಿಯಾಗೇ ಇರಿ ಆದರೆ ಅರ್ಥಸಚಿವರಾಗಿರುವುದು ಬೇಡ ಎಂದು ಪ್ರತಿಪಕ್ಷದ ನಾಯಕರಾದ ಛಲವಾದಿ ನಾರಾಯಣಸ್ವಾಮಿ ಹೇಳಿದ್ದಾರೆ.

ನಾನು 1994ರಲ್ಲಿ ಮೊದಲ ಬಾರಿಗೆ ಹಣಕಾಸು ಸಚಿವನಾಗಿ ಬಜೆಟ್ ಮಂಡನೆ ಮಾಡಿದ್ದೆ. ಅಲ್ಲಿಂದ ಈವರೆಗೂ ಒಟ್ಟು 17 ಬಜೆಟ್ ಮಂಡಿಸಿದ್ದೇನೆ. ಕರ್ನಾಟಕದಲ್ಲಿ ನಾನು ಮಂಡಿಸಿದಷ್ಟು ಆಯವ್ಯಯಗಳನ್ನು ಯಾರೂ ಕೂಡ ಮಂಡಿಸಿಲ್ಲ. ಇದು ಒಂದು ದಾಖಲೆ ಎಂದು ತಮನ್ನು ತಾವೇ ಹೊಗಳಿಕೊಂಡರು.

ನನಗೆ ಶಾಸಕರು, ವಿಧಾನಪರಿಷತ್ ಸದಸ್ಯರು ಮತ್ತು ರಾಜ್ಯದ ಜನತೆಯ ಆಶೀರ್ವಾದವಿದೆ.



ಹೈಕಮಾಂಡ್‌ನ ಬೆಂಬಲವಿದೆ. ನಾನು ರಾಜ್ಯದ ಹಿತಾಸಕ್ತಿ ಮತ್ತು ಜನಪರವಾದ ಬಜೆಟ್ ಮಂಡನೆ ಮಾಡದಿದ್ದರೆ ನನಗೆ ಇಂಥ ಅವಕಾಶ ಸಿಗುತ್ತಿತ್ತೇ ಎಂದು ಪ್ರಶ್ನಿಸಿದರು.

ನಾನು ಜನಪರವಾಗಿ ರಾಜ್ಯದ ಹಿತವನ್ನು ಕಾಪಾಡಿದ್ದರಿಂದಲೇ ನನಗೆ ಇಷ್ಟೂ ಅವಕಾಶ ಸಿಕ್ಕಿದೆ. ನೀವು ಎಷ್ಟೇ ಟೀಕೆ ಟಿಪ್ಪಣಿ ಮಾಡಿದರೂ ತಲೆಕೆಡಿಸಿಕೊಳ್ಳುವುದಿಲ್ಲ ಎಂದು ಹೇಳಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಹೋಲಿಕೆ ಮಾಡಿಕೊಳ್ಳಬಾರದೆಂದು ಪ್ರತಿಪಕ್ಷದ ನಾಯಕರು ಹೇಳುತ್ತಾರೆ. ನಾವು ಒಕ್ಕೂಟ ವ್ಯವಸ್ಥೆಯನ್ನು ಒಪ್ಪಿಕೊಂಡಿದ್ದೇವೆ. ರಾಜ್ಯ ಸರ್ಕಾರಗಳು ಆರ್ಥಿಕವಾಗಿ ಸದೃಢವಾದರೆ ಕೇಂದ್ರ ಸರ್ಕಾರವು ಸದೃಢವಾಗುತ್ತದೆ. ಅದೇ ರೀತಿ ಕೇಂದ್ರ ಸರ್ಕಾರ ಸದೃಢವಾದರೆ ರಾಜ್ಯಗಳು ಪ್ರಬಲವಾಗುತ್ತವೆ.

ಇದನ್ನೇ ಒಕ್ಕೂಟ ವ್ಯವಸ್ಥೆ ಎಂದು ಹೇಳುವುದು. ಟೀಕೆ ಮಾಡಲೇಬಾರದು ಎಂದರೆ ಹೇಗೆ? ಎಂದು ತರಾಟೆಗೆ ತೆಗೆದುಕೊಂಡರು. ರಾಜ್ಯ ಸರ್ಕಾರದ ಬಜೆಟ್‌ನ್ನು ನಾವು ಮುನ್ನಿ ಪಾಲಿಟಿಗೆ ಹೋಲಿಕೆ ಮಾಡಲು ಆಗುವುದಿಲ್ಲ. ಕೇಂದ್ರ ಸರ್ಕಾರಕ್ಕೆ ಹೋಲಿಕೆ ಮಾಡಲೇಬೇಕಾಗುತ್ತದೆ. ಕರ್ನಾಟಕದಿಂದ ಪ್ರತಿ ವರ್ಷ ಕೇಂದ್ರಕ್ಕೆ ಲಕ್ಷಾಂತರ ಕೋಟಿ ತೆರಿಗೆಯನ್ನು ಪಾವತಿಸುತ್ತೇವೆ.

2025-26ರಲ್ಲಿ ಕರ್ನಾಟಕ ಕೇಂದ್ರಕ್ಕೆ 5 ಲಕ್ಷ ಕೋಟಿಗೂ ಹೆಚ್ಚು ತೆರಿಗೆಯನ್ನು ಪಾವತಿಸಿದೆ. ಆದರೆ ನಮಗೆ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬರುವುದು ಅತ್ಯಲ್ಪ. ನಮ ರಾಜ್ಯಕ್ಕೆ ಅನ್ಯಾಯವಾದಾಗ ನಾವು ಪ್ರಶ್ನೆ ಮಾಡಲೇಬೇಕಾಗುತ್ತದೆ. ಹಣಕಾಸು ಆಯೋಗ ಇರುವುದು ಏತಕ್ಕೆ? ಟೀಕೆ ಮಾಡದಿದ್ದರೆ ಅದನ್ನು ಸರ್ವಾಧಿಕಾರಿ ಧೋರಣೆ ಆಗುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬೊಮಾಯಿ ಎಷ್ಟು ಖರ್ಚು ಮಾಡಿದ್ದಾರೆ?:

ಮುಖ್ಯಮಂತ್ರಿಗಳು ವಿಮಾನ ಪ್ರಯಾಣ ಮತ್ತು ಹೆಲಿಕಾಪ್ಟರ್ ಪ್ರಯಾಣಕ್ಕೆ ದುಂದುವೆಚ್ಚ ಮಾಡಿದ್ದಾರೆಂದು ಪ್ರತಿಪಕ್ಷದ ನಾಯಕರು ಆರೋಪ ಮಾಡಿದ್ದಾರೆ. ನಾನು ಮೂರು ವರ್ಷಗಳ ಅವಧಿಯಲ್ಲಿ ಎಷ್ಟು ಖರ್ಚು ಮಾಡಿದ್ದೇನೋ ಬಸರಾಜ ಬೊಮಾಯಿ ಅವರು 2022-23ರಲ್ಲಿ 37 ಕೋಟಿ ರೂ. ವಿಮಾನದಲ್ಲಿ ಪ್ರಯಾಣಿಸಲು ಖರ್ಚು ಮಾಡಿದ್ದಾರೆ. ನಾನು 2023ರಿಂದ ಈವರೆಗೂ ಮಾಡಿರುವ ಖರ್ಚು ಅತ್ಯಲ್ಪ. ನಾವು ಮಾಡಿದರೆ ದುಂದುವೆಚ್ಚ. ಹಾಗಾದರೆ ಬಿಜೆಪಿಯವರು ಮಾಡುವುದು ಏನು ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಪ್ರಧಾನಿ ನರೇಂದ್ರಮೋದಿ ಅವರು ವಿದೇಶ ಪ್ರವಾಸಕ್ಕಾಗಿ 814 ಕೋಟಿ ಹಣವನ್ನು ವೆಚ್ಚ ಮಾಡಿದರು. ಕೆಲವು ಸಂದರ್ಭಗಳಲ್ಲಿ ಸಮಯ ಉಳಿಸಲು ನಾವು ವಿಮಾನ ಇಲ್ಲವೇ ಹೆಲಿಕಾಪ್ಟರ್‌ನಲ್ಲಿ ಪ್ರಯಾಣಿಸಬೇಕಾಗುತ್ತದೆ. ಇದು ಅನಿವಾರ್ಯತೆಯೂ ಹೌದು ಎಂದು ತಮ ನಡೆಯನ್ನು ಸಿಎಂ ಸಮರ್ಥನೆ ಮಾಡಿಕೊಂಡರು.

ನಿಯಮ ಉಲ್ಲಂಘ : ಆರ್‌ಡಿಸಿಸಿ ಬ್ಯಾಂಕ್ ನಿರ್ದೇಶಕರ ವಜಾಗೆ ಬಸವರಾಜ ಒತ್ತಾಯ

ರಾಯಚೂರು, ಮಾ. 26- ರಿಸರ್ವ್ ಬ್ಯಾಂಕ್ ನಿಯಮುಗಳನ್ನು ಉಲ್ಲಂಘಿಸಿ ಅವಧಿ ಪೂರ್ಣಗೊಂಡ ಬಳಿಕವೂ ಹುದ್ದೆಯಲ್ಲಿ ಮುಂದುವರಿದಿರುವ ಆರೋಪದ ಹಿನ್ನೆಲೆ ರಾಯಚೂರು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ (ಆರ್‌ಡಿಸಿಸಿ)ನ ನಾಲ್ವರು ನಿರ್ದೇಶಕರನ್ನು ತಕ್ಷಣವೇ ವಜಾಗೊಳಿಸಬೇಕೆಂದು ಭ್ರಷ್ಟಾಚಾರ ವಿರೋಧಿ ಆಂದೋಲನ ಸಮಿತಿಯ ಪ್ರಧಾನ ಸಂಚಾಲಕ ಜಿ. ಬಸವರಾಜ ನಾಯಕ ಆಗ್ರಹಿಸಿದರು.



ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಶ್ವನಾಥ (ಮಾನವಿ ತೋರಣದಿನ್ನಿ), ಶರಣಗೌಡ ಪಾಟೀಲ್ ಬಯ್ಯಾಪುರ (ಲಿಂಗಸೂಗುರು), ಪಂಪನಗೌಡ ಬಾದರ್ಲಿ (ಸಿಂಧನೂರು) ಹಾಗೂ ರಾಜಶೇಖರ ನಾಯಕ (ದೇವದುರ್ಗ) ಅವರುಗಳು ರಿಸರ್ವ್ ಬ್ಯಾಂಕ್ ನಿಯಮಗಳನ್ನು ಮೀರಿ ತಮ್ಮ 10 ವರ್ಷದ ಅವಧಿ ಪೂರ್ಣಗೊಂಡ ನಂತರವೂ ಹುದ್ದೆಯಲ್ಲಿ ಮುಂದುವರಿದಿದ್ದಾರೆ ಎಂದು ಆರೋಪಿಸಿದರು.

ರಿಸರ್ವ್ ಬ್ಯಾಂಕ್ ನಿಯಮಾವಳಿ ಪ್ರಕಾರ 15-04-2025ರಿಂದ ಅವರ ಅವಧಿ ಮುಗಿದಿರುವುದರಿಂದ ಅವರನ್ನು ಹುದ್ದೆಯಿಂದ ತೆರವುಗೊಳಿಸಬೇಕಾಗಿತ್ತು. ಆದರೆ ಈವರೆಗೆ ಯಾವುದೇ ಕ್ರಮ ಕೈಗೊಳ್ಳದಿರುವುದು ಅನುಮಾನಗಳಿಗೆ ಕಾರಣವಾಗಿದೆ ಎಂದು ಅವರು ಹೇಳಿದರು.

ಈ ಸಂಬಂಧ ಸಿರವಾರ ತಾಲೂಕಿನ ಶೇಖರಪ್ಪ ಹಾಗೂ ಮುದಗಲ್ ಪ್ರಾಥಮಿಕ ಪತ್ತಿನ ಸಹಕಾರ ಸಂಘದ ನಿರ್ದೇಶಕಿ ಶಕುಂತಲಾ ಅವರುಗಳು 11-02-2026ರಂದು ಮನವಿ ಸಲ್ಲಿಸಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ನಿರ್ಲಕ್ಷ್ಯ ತೋರಿದ್ದಾರೆ ಎಂದು ಆರೋಪಿಸಿದರು.

ಇನ್ನಷ್ಟು, ಆರ್‌ಡಿಸಿಸಿ ಬ್ಯಾಂಕ್ ಉದ್ಯೋಗ ನೇಮಕಾತಿ ಸಮಿತಿಯಲ್ಲಿಯೂ ಇದೇ ನಿರ್ದೇಶಕರು ಮುಂದುವರಿದಿರುವುದು ನಿಯಮಬಾಹಿರವಾಗಿದೆ. ಹೀಗಾಗಿ ತಕ್ಷಣವೇ ಸಕ್ಷಮ

3 ನೇ ಪುಟಕ್ಕೆ...

ವಿಶ್ವಕರ್ಮ ಯೋಜನೆಯಡಿ ಡೆಬಿಟ್ ಕಾರ್ಡ ನೀಡುವ ಹೆಸರಿನಲ್ಲಿ ಮಹಿಳೆಯರಿಂದ ಹಣವಸೂಲಿ ಆರೋಪ: ಪ್ರತಿಭಟನೆ





ರಾಯಚೂರು,ಮಾ.25- ಪಿಎಂ ವಿಶ್ವಕರ್ಮ ಯೋಜನೆಯ, ಸ್ವನಿಧಿ ಯೋಜನೆ ಸೌಲಭ್ಯದ ಹೆಸರಿನಲ್ಲಿ ಹೊಲಿಗೆ ಯಂತ್ರ ನೀಡುವುದಾಗಿ ಹೇಳಿ, ಪ್ರತಿಯೊಬ್ಬ ಫಲಾನುಭವಿಗಳಿಂದ 400ರೂ. ಹಣ ಪಡೆಯುತ್ತಿದ್ದಾರೆ ಆದರೆ. ಇದೀಗ ಹೊಲಿಗೆ ಯಂತ್ರಗಳನ್ನೂ ನೀಡದೇ ಕಚೇರಿಯಿಂದ ಹೊರಗೆ ಹೋಗಿ ಎನ್ನುತ್ತಿದ್ದಾರೆ ಎಂದು ಹಲವು ಮಹಿಳೆಯರು ಜಿಲ್ಲಾ ಪಂಚಾಯತ್ ಎದುರು ನೊಂದಣಿ ಮಾಡಿಕೊಳ್ಳುತ್ತಿದ್ದ ಖಾಸಗಿ ಸಂಸ್ಥೆಯ ವಿರುದ್ಧ ಧಿಡೀರ್ ಪ್ರತಿಭಟನೆ ನಡೆಸಿದರು.

ನಗರದ ಜಿಲ್ಲಾ ಪಂಚಾಯತ್ ಎದುರಿನ ಕಟ್ಟಡವೊಂದರಲ್ಲಿ ಖಾಸಗಿ ಸಂಸ್ಥೆಯಾದ ಏರೋ ಗ್ಲೋಬಲ್ ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್ ಎಂಬ ಕಂಪನಿ ರಾಯಚೂರು ಜಿಲ್ಲೆಯ ವಿವಿಧ ಗ್ರಾಮಗಳ ಮಹಿಳೆಯರಿಗೆ ಕರೆ ಮಾಡಿ, ನಿಮಗೆ ಹೊಲಿಗೆ ಯಂತ್ರ ಬಂದಿದೆ. ಬಂದು ಒಂದು ಅಕೌಂಟ್ ಓಪನ್ ಮಾಡಿಸಿ ಎಂದು ಜಿಲ್ಲೆಯ ಗ್ರಾಮೀಣ ಮಹಿಳೆಯರಿಗೆ ಕರೆ ಮಾಡಿದ್ದು, ಮಹಿಳೆಯರು ಹಲವು ತಿಂಗಳಿಂದ ಕಚೇರಿ ಬಂದು ಕಾದು ನೊಂದಣಿ ಮಾಡಿಸಿಕೊಳ್ಳುತ್ತಿದ್ದರು. ಆದರೆ ಮಂಗಳವಾರ ಮಹಿಳೆಯರಿಗೆ ನಿಮ್ಮನ್ಯಾರು ಕರೆದಿದ್ದು, ಮೊದಲು ಹೊರಗೆ ಹೋಗಿ ಎಂದು ಸಂಸ್ಥೆಯ ಸಂಬಂಧಪಟ್ಟವರು ಗಧರಿದ್ದು, ಇದಕ್ಕೆ ಮಹಿಳೆಯರು ಆಕ್ರೋಶ ವ್ಯಕ್ತಪಡಿಸಿದರು. ವಿಶ್ವಕರ್ಮ ಯೋಜನೆಯಡಿ ತರಬೇತಿ ಪಡೆದ

3 ನೇ ಪುಟಕ್ಕೆ...

ಪೆಟ್ರೋಲ್ ಕೊರತೆ ಆತಂಕ: ರಾಯಚೂರಿನಲ್ಲಿ ಬಂಕ್‌ಗಳ ಮುಂದೆ ವಾಹನಗಳ ಸಾಲು





ರಾಯಚೂರು,ಮಾ.26- ಪಶ್ಚಿಮ ಏಷ್ಯಾ ಭಾಗದಲ್ಲಿ ಯುದ್ಧ ವಾತಾವರಣ ತೀವ್ರಗೊಂಡಿರುವ ಹಿನ್ನೆಲೆಯಲ್ಲಿ ಪೆಟ್ರೋಲ್ ಕೊರತೆ ಉಂಟಾಗಬಹುದು ಎಂಬ ಮಾತು ಹರಿದಾಡುತ್ತಿದ್ದು, ರಾಯಚೂರು ನಗರ, ದೇವದುರ್ಗ, ಮಸ್ಕಿ, ದೇವದುರ್ಗ ಹಾಗೂ ಲಿಂಗಸುಗೂರು ತಾಲೂಕಿನ ಹಲವೆಡೆ ವಾಹನಗಳಿಗೆ ಪೆಟ್ರೋಲ್, ಡಿಸೇಲ್ ಹಾಕಿಕೊಳ್ಳಲು ಗ್ರಾಹಕರು ಮುಗಿಬಿದ್ದರು.

ರಾಯಚೂರು ನಗರದ ಸ್ಟೇಷನ್ ರಸ್ತೆ, ಗೋಶಾಲ ರಸ್ತೆ ಸೇರಿದಂತೆ ರಾಯಚೂರು ತಾಲೂಕಿನ ಹಲವು ಪೆಟ್ರೋಲ್ ಬಂಕ್ ಗಳಲ್ಲಿ ದ್ವಿಚಕ್ರ ವಾಹನ ಸವಾರರು, ಆಟೋ, ಕಾರು ಚಾಲಕರು ದೊಡ್ಡದಾದ ಸರತಿ ಸಾಲಿನಲ್ಲಿ ನಿಂತು ಇಂಧನ ಹಾಕಿಕೊಂಡರು, ಸ್ಟೇಷನ್ ರಸ್ತೆಯ ರಾಮ ಮಂದಿರದ ಪಕ್ಕದ ಪೆಟ್ರೋಲ್ ಬಂಕ್ ಮುಂದೆ ಸಾಲುಗಟ್ಟಿದವು.

ಕೆಲವರು ಮಧ್ಯ ಪ್ರಾಚ್ಯ ದೇಶಗಳ ಕದನದಿಂದ ಮತ್ತೆ ಲಾಕ್ ಡೌನ್ ಹೇರಬಹುದು ಎಂಬ ವದಂತಿಗೆ ಕಿವಿಗೊಟ್ಟು ವಾಹನಗಳಿಗೆ ಫುಲ್ ಟ್ಯಾಂಕ್ ಮಾಡಿಕೊಂಡರೆ ಕೆಲವರು ಕ್ಯಾನ್, ದೊಡ್ಡ ಡಬ್ಬಗಳಲ್ಲಿ

3ನೇ ಪುಟಕ್ಕೆ...

ಆರೋಗ್ಯಕರ ಜೀವನಕ್ಕೆ ಪೌಷ್ಟಿಕ ಆಹಾರ ಮತ್ತು ವ್ಯಾಯಾಮ ಅಗತ್ಯ - ಡಾ ನೇಹಾ ಸುಖಾಣಿ

ರಾಯಚೂರು,ಮಾ.26- ತಾರಾನಾಥ ಶಿಕ್ಷಣ ಸಂಸ್ಥೆಯ ಎಲ್.ವಿ.ಡಿ. ಮಹಾವಿದ್ಯಾಲಯ, ರಾಯಚೂರು ಹಾಗೂ ಮಹಿಳಾ ಕಲ್ಯಾಣ ವೇದಿಕೆಯ ವತಿಯಿಂದ ''ಪೌಷ್ಟಿಕ ಆಹಾರ ಮತ್ತು ದೈಹಿಕ ಮಾನಸಿಕ ಆರೋಗ್ಯದ ಮಹತ್ವ'' ಎಂಬ ವಿಷಯದ ಕುರಿತು ಆರೋಗ್ಯ ಜಾಗೃತಿಯ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.



ಕಾರ್ಯಕ್ರಮದ ಕೇಂದ್ರಬಿಂದು ಖ್ಯಾತ ವೈದ್ಯೆ ಡಾ. ನೇಹಾ ಸುಖಾಣಿ, ಎಂಬಿಬಿಎಸ್, ಎಂಡಿ ಮೆಡಿಸಿನ್, ಎಫ್.ಐ.ಸಿ.ಪಿ ಅವರು ಸಸಿಗೆ ನೀರು ಎರೆಯುವ ಮೂಲಕ ಉದ್ಘಾಟಿಸಿ ''ಪೌಷ್ಟಿಕ ಆಹಾರ, ದೈಹಿಕ ಕ್ಷೇಮ ಮತ್ತು ಮಾನಸಿಕ ಆರೋಗ್ಯ'' ಕುರಿತು ಮಾತನಾಡಿದ ಅವರು,ಇಂದಿನ ಯಾಂತ್ರಿಕ ಜೀವನದಲ್ಲಿ ಆರೋಗ್ಯದ ಮಹತ್ವವನ್ನು ವಿವರಿಸಿದ ಅವರು, ಆಧುನಿಕ ಆಹಾರ ಪದ್ಧತಿಯಲ್ಲಿ ಸಂಸ್ಕರಿಸಿದ ಆಹಾರ, ಹೆಚ್ಚಿದ ಸಕ್ಕರೆ ಹಾಗೂ ಅತಿಯಾದ ಕೊಬ್ಬಿನಾಂಶವು ಹೆಚ್ಚುತ್ತಿರುವುದರಿಂದ ಮಧುಮೇಹ, ಸ್ಥೂಲಕಾಯತೆ ಮತ್ತು ಹೃದಯ ಸಂಬಂಧಿ ಕಾಯಿಲೆಗಳ ಅಪಾಯ ಹೆಚ್ಚುತ್ತಿದೆ ಎಂದು ಹೇಳಿದರು. ಜಂಕ್ ಫುಡ್‌ಗಳ ಅತಿಯಾದ ಸೇವನೆಯು ಪೌಷ್ಟಿಕಾಂಶದ ಕೊರತೆ ಹಾಗೂ ದೀರ್ಘಕಾಲದ ಕಾಯಿಲೆಗಳಿಗೆ ಕಾರಣವಾಗುತ್ತದೆ ಎಂದು ಎಚ್ಚರಿಸುತ್ತಾ, ಆರೋಗ್ಯಕರ ಜೀವನಕ್ಕಾಗಿ ತಾಜಾ ತರಕಾರಿಗಳು, ಹಣ್ಣುಗಳು, ಪ್ರೋಟೀನ್‌ಯುಕ್ತ ಆಹಾರ ಮತ್ತು ಸಮತೋಲನ ಆಹಾರವನ್ನು ಸೇವಿಸುವುದು ಅಗತ್ಯವಾಗಿದೆ. ಜೊತೆಗೆ ನಿಯಮಿತ ವ್ಯಾಯಾಮ, ಯೋಗಾಭ್ಯಾಸ ಹಾಗೂ ಸಕಾರಾತ್ಮಕ ಚಿಂತನೆಗಳಿಂದ ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು ಪ್ರತಿಯೊಬ್ಬರೂ ತಮ್ಮ ಜೀವನದ ಅವಿಭಾಜ್ಯ ಅಂಗವಾಗಿಸಿಕೊಂಡರೆ ದೀರ್ಘಾಯುಷ್ಯ ಹಾಗೂ ಸಂತೋಷಕರ ಜೀವನ ನಡೆಸಲು ಸಾಧ್ಯವಾಗುತ್ತದೆ. ಇದರಿಂದ ಆರೋಗ್ಯವಂತ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ ಎಂದು ಪವರ್‌ಪಾಯಿಂಟ್ ಪ್ರಸ್ತುತಿಯ ಮೂಲಕ ಉಪನ್ಯಾಸ ನೀಡಿದರು.

ವೇದಿಕೆಯ ಮೇಲೆ ಕಾಲೇಜು ಆಡಳಿತ ಮಂಡಳಿಯ ಕಾರ್ಯದರ್ಶಿಗಳಾದ ವೀರಹನುಮಾನ ಇವರು ಮಾತನಾಡುತ್ತಾ, ಆಧುನಿಕ ಜೀವನ ಶೈಲಿಯಿಂದ ಜನರಲ್ಲಿ ಹೃದಯ ಸಂಬಂಧಿ ರೋಗಗಳು ಹೆಚ್ಚಾಗುತ್ತಿದ್ದು, ಆರೋಗ್ಯ ಸ್ನೇಹಿ ಜೀವನ ಶೈಲಿಯನ್ನು ಅಳವಡಿಸಿಕೊಳ್ಳಬೇಕಿದೆ ಎಂದು ಹೇಳಿದರು.


ವೇದಿಕೆಯ ಮೇಲೆ ಕಾಲೇಜಿನ ಆಡಳಿತ ಮಂಡಳಿಯ ಸದಸ್ಯರಾದ ಕೆ ನಾಗನಗೌಡ ಇವರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ಸ್ಥಾನವನ್ನು ವಹಿಸಿದ ಪ್ರಭಾರಿ ಪ್ರಾಚಾರ್ಯರಾದ ವೆಂಕಟೇಶ ಅವರು ಮಾತನಾಡುತ್ತಾ, ವಿದ್ಯಾರ್ಥಿ ಗಳು ಆರೋಗ್ಯಕರ ಜೀವನ ಶೈಲಿಯನ್ನು ಅಳವಡಿಸಿಕೊಳ್ಳುವ ಮೂಲಕ ಹಲವಾರು ರೋಗಗಳನ್ನು

3 ನೇ ಪುಟಕ್ಕೆ...

ಮೀಸಲಾತಿ ಕುರಿತು ಸುಪ್ರೀಂ ಕೋರ್ಟ್ ಆದೇಶ ಒಪ್ಪಲಾಗದು: ಸಿಪಿಐ(ಎಂ)

ರಾಯಚೂರು,ಮಾ.26- ಒಬ್ಬ ವ್ಯಕ್ತಿ ಒಮ್ಮೆ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡು ಅದನ್ನು ಸಂಪೂರ್ಣವಾಗಿ ಒಪ್ಪಿಕೊಂಡು ಪಾಲಿಸಿದರೆ, ಅವರನ್ನು ಪರಿಶಿಷ್ಟ ಜಾತಿ ಸಮುದಾಯದ ಸದಸ್ಯರೆಂದು ಪರಿಗಣಿಸಲಾಗುವುದಿಲ್ಲ ಎಂಬ ಆಂಧ್ರಪ್ರದೇಶ ಹೈಕೋರ್ಟ್ ಆದೇಶವನ್ನು ಸುಪ್ರೀಂ ಕೋರ್ಟ್ ಅನುಮೋದಿಸಿ ರುವುದನ್ನು ಯಾವುದೇ ಕಾರಣಕ್ಕೂ ಒಪ್ಪಲಾಗದು ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸವಾದಿ) ಸಿಪಿಐ(ಎಂ) ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕೆ.ಜಿ. ವೀರೇಶ ತಿಳಿಸಿದ್ದಾರೆ.



ಪರಿಶಿಷ್ಟ ಜಾತಿ ಸಮುದಾಯಕ್ಕೆ ನೀಡಲಾಗುವ ಮೀಸಲಾತಿ ಮತ್ತು ಇತರ ಸುರಕ್ಷತಾ ಕ್ರಮಗಳು ಸಂಬಂಧಿತ ಸಮುದಾಯಗಳ ಸಾಮಾಜಿಕ-ಆರ್ಥಿಕ ಸ್ಥಿತಿಯನ್ನು ಆಧರಿಸಿವೆ.

ಆದರೆ ಪ್ರಸ್ತುತ ತೀರ್ಪು ಆ ಸಾಮಾಜಿಕ-ಆರ್ಥಿಕ ಪರಿಗಣನೆಗಳಿಗಿಂತ ಸಂಬಂಧಿತ ಗುಂಪಿನ ಧಾರ್ಮಿಕ ಗುರುತಿಗೆ ಆದ್ಯತೆ ನೀಡುತ್ತದೆ. ಆದ್ದರಿಂದ, ಈ

3 ನೇ ಪುಟಕ್ಕೆ...

ಕೆ.ಎಸ್.ಎನ್ ಸೇವಾ ಸಮಿತಿಯಿಂದ ಸಾರ್ವಜನಿಕ ಆಸ್ಪತ್ರೆಯ ಮುಂದೆ ಕುಡಿಯುವ ನೀರಿನ ಅರವಂಟಿಗೆ ಉದ್ಘಾಟನೆ



ದೇವದುರ್ಗ ,ಮಾ.26- ಬೇಸಿಗೆಯ ತಾಪಮಾನ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು ತಿವ್ರ ಬಿಸಿಲಿನ ನಡುವೆ ಸಾರ್ವಜನಿಕರ ದಾಹ ನೀಗಿಸುವ ನಿಟ್ಟಿನಲ್ಲಿ ಕೆ ಎಸ್ ಎನ್ ಸೇವಾ ಸಮಿತಿ ನಮ್ಮ ಮಾಜಿ ಸಚಿವರು ಕೆ,ಶಿವನಗೌಡ ನಾಯಕರವರ ಹೆಸರಿನ ಈ ಸಮಿತಿ ಸಾರ್ವಜನಿಕ ಆಸ್ಪತ್ರೆಯ ಮುಂದೆ ಶುದ್ಧ ಕುಡಿಯುವ ನೀರಿನ ಅರವಂಟಿಗೆ ಪ್ರಾರಂಭಿಸಲಾಗಿದೆ, ಸಾರ್ವಜನಿಕರು ಉಪಯೋಗ ಪಡೆದುಕೊಳ್ಳಬೇಕು ಎಂದು ಬಿಜೆಪಿ ತಾಲೂಕ ಅಧ್ಯಕ್ಷ ಡಾಶರಣಬಸವ ಪಾಟೀಲ್ ಜೋಳದಹೆಡ್ಗಿ ಹೇಳಿದರು.

ಅವರು ಇಂದು ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕು ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಮುಂದುಗಡೆ ಕುಡಿಯುವ ನೀರಿನ ಅರವಂಟಿಗೆ ಘಟಕ ಉದ್ಘಾಟಿಸಿ ಮಾತನಾಡಿದ ಅವರು ಈ ವರ್ಷ ರಾಯಚೂರು ಜಿಲ್ಲೆಯಾದ್ಯಂತ ಈಗಾಗಲೇ ಅತಿಹೆಚ್ಚು ತಾಪಮಾನ ಹೆಚ್ಚಾಗಿದ್ದು,

ಸಾರ್ವಜನಿಕರು ದಿನ ಬೆಳಗಾದರೆ ಪಟ್ಟಣಕ್ಕೆ ಆಸ್ಪತ್ರೆ ವ್ಯಾಪಾರ ವಹಿವಾಟಿಗಾಗಿ ಬರುವ ಸಾವಿರಾರು ಪ್ರಯಾಣಿಕರು ಮತ್ತು

3 ನೇ ಪುಟಕ್ಕೆ...

ವಿಶ್ವಕರ್ಮ ಸಮಾಜದ ಬೇಡಿಕೆಗಳಿಗೆ ಒತ್ತಾಯಿಸಿ ಪಂಜಿನ ಮೆರವಣಿಗೆ



ರಾಯಚೂರು,ಮಾ.26- ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ಹಾಗೂ ಜಿಲ್ಲಾ ವಿಶ್ವಕರ್ಮ ಸಮಾಜ ರಾಯಚೂರು ಇವರ ಆಶ್ರಯದಲ್ಲಿ ಬುಧವಾರ ಸಂಜೆ ನಗರದಲ್ಲಿ ವಿಶ್ವಕರ್ಮ ಸಮಾಜದ ವಿವಿಧ ಬೇಡಿಕೆಗಳಿಗೆ ಒತ್ತಾಯಿಸಿ ಪಂಜಿನ ಮೆರವಣಿಗೆ ನಡೆಸಲಾಯಿತು.

ನಗರದ ನೇತಾಜಿ ನಗರ ವೃತ್ತದಿಂದ ಆರಂಭವಾದ ಮೆರವಣಿಗೆ ಜಾಕಿರ್ ಹುಸೇನ್ ಸರ್ಕಲ್, ಬಸ್ ನಿಲ್ದಾಣ, ಅಂಬೇಡ್ಕರ್ ವೃತ್ತದವರೆಗೆ ರಾತ್ರಿ 9 ಗಂಟೆಯವರೆಗೆ ನಡೆಯಿತು. ಬಳಿಕ ಅಂಬೇಡ್ಕರ್ ವೃತ್ತದಲ್ಲಿ ಜಿಲ್ಲಾಧಿಕಾರಿ ಕಚೇರಿಯಿಂದ ಆಗಮಿಸಿದ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಮೆರವಣಿಗೆಯ ವೇಳೆ ಸರ್ಕಾರದ ಗಮನ ಸೆಳೆಯಲು ವಿವಿಧ ಘೋಷಣೆಗಳನ್ನು ಕೂಗಿ ಶಾಂತಿಯುತ ಪ್ರತಿಭಟನೆ

3 ನೇ ಪುಟಕ್ಕೆ...

ಕ್ಷಯ ರೋಗಕ್ಕೆ ಉಚಿತ ಚಿಕಿತ್ಸೆ , ಸಮಾಲೋಚನೆ



ಬೀದರ, ಮಾ.26-

ಕ್ಷಯರೋಗ ಪತ್ತೆಯಾದ ರೋಗಿಗಳಿಗೆ ಉಚಿತವಾದ ಆಪ್ತ ಸಮಾಲೋಚನೆ ಮತ್ತು ಚಿಕಿತ್ಸೆ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಲಭ್ಯವಿದ್ದು, ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಎಂದು ಜಿಲ್ಲಾ ಕ್ಷಯರೋಗ ಅಧಿಕಾರಿ ಡಾ.ಅನೀಲಕುಮಾರ ಚಿಂತಾಮಣಿ ತಿಳಿಸಿದರು.

ಅವರು ಮಂಗಳವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಕ್ಷಯರೋಗ ನಿರ್ಮೂಲನಾ ಕೇಂದ್ರ ಬೀದರ ಸಹಯೋಗದಲ್ಲಿ ಜಿಲ್ಲಾ ಕ್ಷಯರೋಗ ನಿರ್ಮೂಲನಾ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಕ್ಷಯರೋಗ ದಿನಾಚಾರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಜಿಲ್ಲೆಯಲ್ಲಿ 2024-25ರಲ್ಲಿ ಒಟ್ಟು 2516 ರೋಗಿಗಳಿಗೆ ಚಿಕಿತ್ಸೆ ಗೆ ಒಳಪಡಿಸಿದೆ 2257 ರೋಗಿಗಳು ಗುಣಮುಖರಾಗಿದ್ದಾರೆ. ಸದೃಢ ದೇಶ ಕಟ್ಟಲು ಸದೃಢ ಆರೋಗ್ಯ ಮುಖ್ಯ. ಕ್ಷಯರೋಗವು ಸಂಪೂರ್ಣವಾಗಿ ಗುಣಪಡಿಸಬಹುದಾದ ಕಾಯಿಲೆಯಾಗಿದೆ. ಹೊಸ ಪ್ರಕರಣಗಳ ಪತ್ತೆ ಹಚ್ಚುವಿಕೆಯು ವೇಗ ಪಡೆದುಕೊಂಡಿದೆ ಮುಖ್ಯವಾಗಿ ರೋಗಿಗಳಿಗ ಆಪ್ತ ಸಮಾಲೋಚನೆಯ ಮಾಡಿ ಮನವೊಲಿಸಿ ಮಧ್ಯದಲ್ಲಿಯೇ ಚಿಕಿತ್ಸೆ ನಿಲ್ಲಿಸುವ ಪ್ರಮಾಣ ತಗ್ಗಿಸಬೇಕು. ಈ ವರ್ಷ ಸುಮಾರು 50940 ಸಾವಿರ ಕಫ ಮಾದರಿ ಸಂಗ್ರಹಣೆಯಲ್ಲಿ 2552 ಹೊಸ ಟಿ.ಬಿ. ರೋಗಿಗಳನ್ನು ಪತ್ತೆ ಹಚ್ಚಲಾಗಿದೆ ಹೀಗಿದ್ದಾಗ ಸಹ ಸಾಧಸುವುದು ಇನ್ನು ಬಹಳ ಇದೆ. ಜಿಲ್ಲೆಯ ಎಲ್ಲಾ ಗ್ರಾಮ ಮತ್ತು ಪಂಚಾಯತಿಗಳ ಸಹಯೋಗದೊಂದಿಗೆ 2026ರಲ್ಲಿ ಕ್ಷಯರೋಗ ಮುಕ್ತ ಬೀದರ ಜಿಲ್ಲೆಮಾಡುವಂತಹ ಗುರಿ ಹೊಂದಲಾಗಿದೆ. ಟ.ಬಿ. ಮುಕ್ತ ದೇಶ ಮಾಡಲು ಚಿಕಿತ್ಸೆ ಆಪ್ತ ಸಮಾಲೋಚನೆ ಮತ್ತು ತಿಳುವಳಿಕೆ ಈ ಮೂರು ಅಂಶಗಳನ್ನೊಳಗೊಂಡ ವ್ಯವಸ್ಥೆಯೊಂದಿಗೆ ಜಿಲ್ಲೆಯನ್ನು ಕ್ಷಯರೋಗ ಮುಕ್ತ ಮಾಡಬಹುಹುದೆಂದರು.

ಕ್ಷಯರೋಗಿಗಳನ್ನು ಬೇಗ ಪತ್ತೆ ಹಚ್ಚವುದು, ತಕ್ಷಣ ಚಿಕಿತ್ಸೆ ನೀಡುವ ಸಂಕಲ್ಪದೊಂದಿಗೆ ಪ್ರಸಕ್ತ ಸಾಲಿನಲ್ಲಿಯೇ ನಾವು ಕ್ಷಯ ಮುಕ್ತ ಜಿಲ್ಲೆಯಾಗಿಸಲು ಸಾಧ್ಯ. ಆರೋಗ್ಯ ಕಾರ್ಯಕರ್ತರು ಹಗಲಿರುಳೆನ್ನದೇ ಈ ದಿಸೆಯಲ್ಲಿ ಕಾರ್ಯ ಕಾರ್ಯಪ್ರವೃತ್ತರಾಗುವಂತೆ ಕರೆ ಕೊಟ್ಟರು. ಪ್ರತಿಯೊಬ್ಬರು ತಮ್ಮ ವೈಯಕ್ತಿಕ ಕಾಳಜಿ ಮತ್ತು ಚಿಕಿತ್ಸೆ ಮಾಡಬೇಕು ಮೇಲಿಂದ ಮೇಲೆ ಆಪ್ತ ಸಮಾಲೋಚನೆ ಮಾಡುತ್ತ ರೋಗಿಯೋಂದಿಗೆ ನೇರ ಸಂಪರ್ಕ ಹೊಂದಬೇಕು ಅಂದಾಗ ಮಾತ್ರ ಕ್ಷಯ ಮುಕ್ತ ಜಿಲ್ಲೆ ಮಾಡಲು ಸಾಧ್ಯ ಎಂದರು.

ಈ ಸಂದರ್ಭದಲ್ಲಿ ಆರೋಗ್ಯ ಇಲಾಖೆ ಅಧಿಕಾರಿಗಳು, ಆರೋಗ್ಯ ಇಲಾಖೆ ಸಿಬ್ಬಂದಿ ವರ್ಗದವರು ಸೇರಿದಂತೆ ಇತರರು ಉಪಸ್ಥಿತರಿದ್ದರು.



ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮ

ಬೀದರ, ಮಾ.26-

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರಕಾಶ ಅರ್ಜುನ ಬನಸೋಡೆ ಅವರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸವಲತ್ತುಗಳು ಮತ್ತು ಆಸಿಡ್ ದಾಳಿಯ ಬಲಿಪಶುಗಳ ಯೋಜನೆ 2026 (Victims of Acid Attack Scheme 2016) ಬಗ್ಗೆ ತಿಳಿಸಿದರು. ಅವರು ಬುಧವಾರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ ಹಾಗೂ ಜಿಲ್ಲಾ ಪಂಚಾಯತ, ಮತ್ತು ಗ್ರಾಮಿಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಬೀದರ ಇವರ ಸಂಯುಕ್ತಾಶ್ರಯದಲ್ಲಿ ಮನ್ನಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಜಲ ದಿನ ಹಾಗೂ NALSA Legal Services to Victims of Acid Attack Scheme 2016 ಅಂಗವಾಗಿ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಬೀದರ ತಾಲ್ಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಮಾಣಿಕರಾವ ಪಾಟೀಲ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು. ಹಾಗೂ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಸನು ಮ್ಮಖಿಯ್ಯಾ ಬಿ . ಸ್ವಾಮಿ ಅವರು ಸಮಾಜದಲ್ಲಿ ಜನರು ನೀರನ ಬಳಕೆ ಮತ್ತು ಮಹತ್ವ ಕುರಿತು ಮಾತನಾಡಿದರು. ಉಪನ್ಯಾಸಕರಾಗಿ ಬೀದರ ವಕೀಲ ಜಗನಾಥ ಸೊರಳ್ಳಿ ವಿಶ್ವ ಜಲ ದಿನ ಕುರಿತು ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಬೀದರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗದ ಜೆ.ಇ. ತಿಪ್ಪೇಶಕುಮಾರ, ಬೀದರ ಜಲ ಜೀವನ ಮಿಷನ ಯೋಜನೆಯ ಜಿಲ್ಲಾ ಯೋಜನಾ ವ್ಯವಸ್ಥಾಪಕ ಪೆತ್ರು.ಜೆ ಸೇರಿದಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಮತ್ತು ಮನ್ನಳ್ಳಿ ಗ್ರಾಮ ಪಂಚಾಯತ ಸಿಬ್ಬಂದಿಗಳು ಹಾಗೂ ಗ್ರಾಮಸ್ಥರು ಪಸ್ಥಿತರಿದ್ದರು. ಮನ್ನಳ್ಳಿ ಗ್ರಾಮ ಪಂಚಾಯತ ಪಿಡಿಓ ಕನಕರಾಯ ಎಲ್ಲರನ್ನು ಸ್ವಾಗತಿಸಿದರು.

ಕೊಪ್ಪಳ ಜಿಲ್ಲೆಯ ಶಾಲಾ ಕಾಲೇಜುಗಳಲ್ಲಿ ಹಾಗೂ ಜೆಸ್ಕಾಂ ಕಛೇರಿಗಳಲ್ಲಿ ಕಡ್ಡಾಯವಾಗಿ ಬಯೋಮೆಟ್ರಿಕ್.ಸಿಸಿ ಟಿವಿ ಕ್ಯಾಮೆರಾಗಳನ್ನು ಅಳವಡಿಕೆಗೆ ಆಗ್ರಹಿಸಿ ಜಿಲ್ಲಾಧಿಕಾರಿಗೆ ಮನವಿ.



ಕೊಪ್ಪಳ,ಮಾ.26-

ಜಿಲ್ಲೆಯ ಶಾಲಾ ಕಾಲೇಜುಗಳಲ್ಲಿ ಹಾಗೂ ಜೆಸ್ಕಾಂ ಕಛೇರಿಗಳಲ್ಲಿ ಕಡ್ಡಾಯವಾಗಿ ಬಯೋಮೆಟ್ರಿಕ್.ಸಿಸಿ ಟಿವಿ ಕ್ಯಾಮೆರಾಗಳನ್ನು ಅಳವಡಿಕೆಗೆ ಆಗ್ರಹಿಸಿ ಜಿಲ್ಲಾ ಆಡಳಿತ ಭವನದಲ್ಲಿ ಜಿಲ್ಲಾಧಿಕಾರಿ ಸುರೇಶ್ ಬಿ.ಇಟ್ನಾಳ ಅವರಿಗೆ ಜನಪರ ಸಂಘಟನೆಗಳ ಒಕ್ಕೂಟ ದಿಂದ ಮನವಿ ಸಲ್ಲಿಸಲಾಯಿತು.

ಕೊಪ್ಪಳ ಜಿಲ್ಲೆಯ ಶಾಲಾ ಕಾಲೇಜುಗಳಲ್ಲಿ ಮತ್ತು ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಜೆಸ್ಕಾಂ) ಕಛೇರಿಗಳಲ್ಲಿ ಕಡ್ಡಾಯವಾಗಿ ಬಯೋಮೆಟ್ರಿಕ್ ಮತ್ತು ಸಿಸಿ ಟಿವಿ ಕ್ಯಾಮೆರಾಗಳನ್ನು ಅಳವಡಿಸಿ ಇಪ್ಪತ್ತು ನಾಲ್ಕು ತಾಸು ಚಾಲನೆಯಲ್ಲಿ ಇರಬೇಕು.ಕೆಟ್ಟರೆ ತಕ್ಷಣ ದುರಸ್ತಿ ಗೊಳಿಸಬೇಕು. ಸ್ಥಗಿತಗೊಂಡಿದ್ದರೆ ಆಯಾ ಕಛೇರಿ ಮುಖ್ಯಸ್ಥರನ್ನೇ ಹೊಣೆಗಾರರನ್ನಾಗಿ ಮಾಡಿ ನಿರ್ಲಕ್ಷ್ಯ ಮತ್ತು ಬೇಜವಾಬ್ದಾರಿ ಕರ್ತವ್ಯ ಎಂದು ಪರಿಗಣಿಸಿ ಕಠಿಣ ಕ್ರಮ ಕೈಗೊಳ್ಳಬೇಕು.

ಕೊಪ್ಪಳ ಜಿಲ್ಲೆಯ ಶಾಲಾ ಕಾಲೇಜುಗಳಲ್ಲಿಯೂ ವಿಶೇಷವಾಗಿ ಕೆಲ ಮುಖ್ಯೋಪಾಧ್ಯಾಯರು. ಶಿಕ್ಷಕರು. ಪ್ರಾಚಾರ್ಯರು. ಉಪನ್ಯಾಸಕರು.ಸಿಬ್ಬಂದಿಗಳು ಬೆಳ್ಳಿಗೆ ಪ್ರಾರ್ಥನೆ ಮುಗಿದ ಬಳಿಕ ಬರುತ್ತಾರೆ. ಬೋಧನಾ ಅವಧಿ ಮುಗಿಯುವ ಮೊದಲು ಹೊರಟು ಹೋಗುತ್ತಾರೆ. ಇದರಿಂದ ಜಿಲ್ಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಹಾಗೂ ಕಾಲೇಜು ಶಿಕ್ಷಣ ಗುಣಮಟ್ಟ ವಿಪರೀತ ಕುಸಿದಿದೆ. ಮಕ್ಕಳ ಹಾಜರಾತಿ ಗಿಂತ ಶಿಕ್ಷಕರ ಉಪನ್ಯಾಸಕರ.ಮುಖ್ಯೋಪಾಧ್ಯಾಯರು ಹಾಗೂ ಪ್ರಾಚಾರ್ಯರರ ಹಾಜರಾತಿ ಕಡ್ಡಾಯವಾಗಬೇಕು. ನಿಗದಿತ ಸಮಯದೊಳಗೆ ಬಂದು ಅವಧಿ ಮುಗಿದ ನಂತರ ಹೋಗಲು ಸಿಸಿ ಟಿವಿ ಕ್ಯಾಮೆರಾಗಳು ಮತ್ತು ಬಯೋಮೆಟ್ರಿಕ್ ಹಾಜರಾತಿ ಕಡ್ಡಾಯವಾಗಿ ಅಳವಡಿಸುವ ಮೂಲಕ ಜಿಲ್ಲೆಯ ಶೈಕ್ಷಣಿಕ ಗುಣಮಟ್ಟ ಸುಧಾರಣೆಗೆ ಕ್ರಮ ಕೈಗೊಳ್ಳಬೇಕು.

ಜಿಲ್ಲಾ ಕೇಂದ್ರದ ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಜೆಸ್ಕಾಂ) ವಿಭಾಗ ಮತ್ತು ಉಪ ವಿಭಾಗಗಳಲ್ಲಿ ಕಾರ್ಯ ನಿರ್ವಾಹಕ ಅಭಿಯಂತರರು. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು. ಸಹಾಯಕ ಅಭಿಯಂ ತರರು ಸೇರಿದಂತೆ ಶಾಖಾಧಿಕಾರಿ ಕಛೇರಿಗಳ ಸಹಾಯಕ.ಕಿರಿಯ ಅಭಿಯಂತರರು.

ಅಧಿಕಾರಿಗಳು.ಸಿಬ್ಬಂದಿಗಳಲ್ಲಿ ಕೆಲ ನೌಕರರು ಸೇವೆಗೆ ಹಾಜರಾಗದೆ ದುಬಾರಿ ವೇತನ ಪಡೆಯುತ್ತಿದ್ದರೆ ಇನ್ನೂ ಕೆಲವರು ಕಛೇರಿ ಸಮಯಕ್ಕೆ ಸರಿಯಾಗಿ ಬಾರದೇ ತಡವಾಗಿ ಬಂದು ಬೇಗ ಹೊರಟು ಹೋಗಲು ಯಾವುದೇ ರೀತಿಯ ಅಡೆತಡೆಗಳು ಇಲ್ಲದಂತಾಗಿದೆ. ತಕ್ಷಣ ಅಭಿಯಂತರರಿಗೆ. ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿಗಳಿಗೆ ತಪ್ಪದೆ ಸಮಯಕ್ಕೆ ಸರಿಯಾಗಿ ಬಂದು ಕಛೇರಿ ಅವಧಿ ಮುಗಿದ ಬಳಿಕ ಹೋಗುವಂತೆ ಸಿಸಿ ಟಿವಿ ಕ್ಯಾಮೆರಾಗಳು ಮತ್ತು ಬಯೋಮೆಟ್ರಿಕ್ ಹಾಜರಾತಿ ಕಡ್ಡಾಯ ಮಾಡಿ ಆದೇಶ ಹೊರಡಿಸಬೇಕು ಎಂದು ಜನಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಸ್.ಎ.ಗಫಾರ್.ಪ್ರಗತಿಪರ ಸಂಘಟನೆಗಳ ಒಕ್ಕೂಟದ ಸಂಚಾಲಕರಾದ ಬಸವರಾಜ್ ಶೀಲವಂತರ್ ಪಾಸ್ಟರ್ಸ್ ಅಸೋಸಿಯೇಷನ್ ಜಿಲ್ಲಾ ಅಧ್ಯಕ್ಷ ಚನ್ನಬಸಪ್ಪ ಎಂ. ಅಪ್ಪಣರ್ವ.ರ್ ಮುಖಂಡರಾದ ಮಖಬೂಲ್ ರಾಯಚೂರು. ಶಿವಪ್ಪ ಹಡಪದ್ ಮುಂತಾದವರು ಒತ್ತಾಯಿಸಿ ಮನವಿ ಸಲ್ಲಿಸಿದರು.

ಬಳ್ಳಾರಿ: 40 ಗಂಟೆಗಳ ಮಧ್ಯಸ್ಥಿಕೆ ತರಬೇತಿ ಶಿಬಿರಕ್ಕೆ ನ್ಯಾ.ಕೆ.ಜಿ ಶಾಂತಿ ಚಾಲನೆ

ನ್ಯಾಯಾಂಗ ವ್ಯವಸ್ಥೆಯಲ್ಲಿ ಮಧ್ಯಸ್ಥಿಕೆದಾರರ ಪಾತ್ರ ಮಹತ್ತರ

ಬಳ್ಳಾರಿ,ಮಾ.26-

ನ್ಯಾಯಾಲಯಗಳಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಪ್ರಕರಣಗಳ ಹೊರೆ ತಗ್ಗಿಸಲು ಮತ್ತು ಸಾರ್ವಜನಿಕರಿಗೆ ತ್ವರಿತ ನ್ಯಾಯ ಒದಗಿಸಲು 'ಮಧ್ಯಸ್ಥಿಕೆ' ಪ್ರಕ್ರಿಯೆಯು ಅತ್ಯಂತ ಪರಿಣಾಮಕಾರಿ ಮಾರ್ಗವಾಗಿದೆ ಎಂದು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ಕೆ.ಜಿ.ಶಾಂತಿ ಅವರು ಹೇಳಿದರು.

ಕರ್ನಾಟಕ ಮಧ್ಯಸ್ಥಿಕೆ ಕೇಂದ್ರ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಇವರ ಸಂಯುಕ್ತಾಶ್ರಯದಲ್ಲಿ ಬಳ್ಳಾರಿ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳ ಮಧ್ಯಸ್ಥಿಕೆದಾರರಿಗೆ ಮಾ.25 ರಿಂದ 29 ರ ವರೆಗೆ ನಗರದ ತಾಳೂರು ರಸ್ತೆಯ ಹೊಸ ನ್ಯಾಯಾಲಯ ಸಭಾಂಗಣದಲ್ಲಿ ಏರ್ಪಡಿಸಿದ್ದ 40 ಗಂಟೆಗಳ ಮಧ್ಯಸ್ಥಿಕೆ ತರಬೇತಿ ಶಿಬಿರಕ್ಕೆ ಬುಧವಾರ ಚಾಲನೆ ನೀಡಿ ಅವರು ಮಾತನಾಡಿದರು.

ಸಾಂಪ್ರದಾಯಿಕ ನ್ಯಾಯಾಲಯದ ಪ್ರಕ್ರಿಯೆಗಿಂತ ಮಧ್ಯಸ್ಥಿಕೆಯು ಭಿನ್ನವಾಗಿದೆ. ಇಲ್ಲಿ ಮಧ್ಯಸ್ಥಿಕೆದಾರರು ಕೇವಲ ಸಮಸ್ಯೆಯನ್ನು ಆಲಿಸದೆ, ಉಭಯ ಪಕ್ಷಗಳ ನಡುವೆ ಸೌಹಾರ್ದಯುತ ವಾತಾವರಣ ನಿರ್ಮಿಸಿ ಸಮಸ್ಯೆ ಇತ್ಯರ್ಥಕ್ಕೆ ಅನುವು ಮಾಡಿಕೊಡುತ್ತಾರೆ. ಈ 5 ದಿನಗಳ ತರಬೇತಿಯು ಕೇವಲ ಕಾನೂನು ತಿಳುವಳಿಕೆಯನ್ನಷ್ಟೇ ನೀಡದೆ, ಮಧ್ಯಸ್ಥಿಕೆದಾರರ ಶಾಂತಿಯುತ ಚಿಂತನೆಯನ್ನು ವೃದ್ಧಿಸಿ ಅವರ



ವ್ಯಕ್ತಿತ್ವ ವಿಕಸನಕ್ಕೂ ಸಹಕಾರಿಯಾಗಲಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಮಧ್ಯಸ್ಥಿಕೆಯಿಂದ ಪ್ರಕರಣಗಳು ಶಾಶ್ವತವಾಗಿ ಇತ್ಯರ್ಥಗೊಳ್ಳುತ್ತವೆ ಮತ್ತು ಮೇಲ್ಮನವಿ ಸಲ್ಲಿಸುವ ಅಗತ್ಯವಿರುವುದಿಲ್ಲ. 'ನಾನು' ಎಂಬ ಅಹಂಕಾರದಿಂದಲೇ ಸಮಾಜದಲ್ಲಿ ಹೆಚ್ಚಿನ ವಿವಾದಗಳು ಹುಟ್ಟಿಕೊಳ್ಳುತ್ತವೆ. ಈ ಅಹಂಕಾರವನ್ನು ಬಿಟ್ಟು 'ನಾವು' ಎಂಬ ಭಾವನೆಯೊಂದಿಗೆ ಕೆಲಸ ಮಾಡಿದರೆ ನ್ಯಾಯಾಂಗ ವ್ಯವಸ್ಥೆಯ ಮೇಲಿನ ಒತ್ತಡ ಕಡಿಮೆಯಾಗಿ ಸಮಾಜದಲ್ಲಿ ನೆಮ್ಮದಿ ನೆಲೆಸಲು ಸಾಧ್ಯ ಎಂದು ನ್ಯಾಯಾಧೀಶರು ಕಿವಿಮಾತು ಹೇಳಿದರು.

ಹಿರಿಯ ತರಬೇತುದಾರರಾದ ಬ್ರಿಂದಾ ನಂದಕುಮಾರ್ ಅವರು ಮಾತನಾಡಿ, ಇಂದಿನ ವೇಗದ ಯುಗದಲ್ಲಿ ನ್ಯಾಯಾಂಗ ವ್ಯವಸ್ಥೆಯ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ಮತ್ತು ಸೌಹಾರ್ದಯುತವಾಗಿ ವಿವಾದಗಳನ್ನು ಬಗೆಹರಿಸಿಕೊಳ್ಳಲು 'ಮಧ್ಯಸ್ಥಿಕೆ' ಅತ್ಯಂತ ಅವಶ್ಯಕ. ಮಧ್ಯಸ್ಥಿಕೆ ಎಂಬುದು ಕೇವಲ ವಕೀಲರಿಗೆ ಅಥವಾ ಮಧ್ಯಸ್ಥಿಕೆದಾರರಿಗೆ ಸೀಮಿತವಾದ ತಾಂತ್ರಿಕ ಪ್ರಕ್ರಿಯೆಯಲ್ಲ. ಇದೊಂದು ಜೀವನ ಕೌಶಲ್ಯ. ಇದನ್ನು ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳುವುದ'ರಿಂದ ಮನಸ್ಸಿ ಗೆ ಶಾಂತಿ ಸಿಗುತ್ತದೆ ಮತ್ತು ಉತ್ತಮ ಬಾಂಧವ್ಯ ವೃದ್ಧಿಯಾಗುತ್ತದೆ ಎಂದು ಹೇಳಿದರು.

ಹಳೆಯ ಕಾಲದಂತೆ ದಶಕಗಳ ಕಾಲ ನ್ಯಾಯಾಲಯದ ಮೊರೆ ಹೋಗಿ ಕಾಯುವ ತಾಳ್ಮೆ ಇಂದಿನ ಪೀಳಿಗೆಗೆ ಇಲ್ಲ. ಹಾಗಾಗಿ, ಕಾಲಕ್ಕೆ ತಕ್ಕಂತೆ ನಾವು ಬದಲಾಗಬೇಕಿದೆ ಮತ್ತು ಮಧ್ಯಸ್ಥಿಕೆಯಂತಹ ಪರ್ಯಾಯ ಮಾರ್ಗಗಳನ್ನು ಅಳವಡಿಸಿಕೊಳ್ಳಬೇಕಿದೆ. ಬಳ್ಳಾರಿಗೆ ಇದು ತಮ್ಮ ಮೊದಲ ಭೇಟಿಯಾಗಿದ್ದು, ಇಲ್ಲಿನ ಕಾನೂನು ಆಸಕ್ತರೊಂದಿಗೆ ಸಂವಹನ ನಡೆಸುತ್ತಿರುವುದು ಸಂತಸ ತಂದಿದೆ ಎಂದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ರಾವ್ ಬ್ರಹ್ಮಂ ಅವರು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ನ್ಯಾಯಾಲಯಗಳಲ್ಲಿ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವ ಬೆನ್ನಲ್ಲೇ, 'ಮಧ್ಯಸ್ಥಿಕೆ' ಪ್ರಕ್ರಿಯೆಯು ವಿವಾದಗಳನ್ನು ಶಾಂತಿಯುತವಾಗಿ ಬಗೆಹರಿಸುವಲ್ಲಿ ಪ್ರಬಲ ಅಸ್ತ್ರವಾಗಿ ಹೊರಹೊಮ್ಮುತ್ತಿದೆ ಎಂದು ಹೇಳಿದರು. ಪ್ರಪಂಚದ ದೊಡ್ಡ ದೊಡ್ಡ ಯುದ್ಧಗಳನ್ನೇ ಮಧ್ಯಸ್ಥಿಕೆಯ ಮೂಲಕ ನಿಲ್ಲಿಸಲು ಸಾಧ್ಯವಿರುವಾಗ, ಇಬ್ಬರು ಕಕ್ಷಿದಾರರ ನಡುವಿನ ವಿವಾದಗಳನ್ನು ಬಗೆಹರಿಸುವುದು ಅಸಾಧ್ಯವಲ್ಲ. ಪ್ರಸ್ತುತ ನ್ಯಾಯಾಲಯಗಳಿಂದ ಮಧ್ಯಸ್ಥಿಕೆಗೆ ಬರುವ ಪ್ರಕರಣಗಳಲ್ಲಿ ಸುಮಾರು ಶೇ.95 ಪ್ರಕರಣಗಳು ಸರಿಯಾದ ಸಂಧಾನವಾಗದೆ ವಾಪಸ್ ಹೋಗುತ್ತಿವೆ. ಈ ಸ್ಥಿತಿಯನ್ನು ಬದಲಾಯಿಸಿ, ತರಬೇತಿಯ ನಂತರ ವಕೀಲರು ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕಿದೆ ಎಂದರು. ಈ ತರಬೇತಿ ಕಾರ್ಯಾಗಾರವು ವಕೀಲರಿಗೆ ಹೊಸ ದೃಷ್ಟಿಕೋನವನ್ನು ನೀಡಿ ದ್ದು, ಮುಂದಿನ ದಿನಗಳಲ್ಲಿ ಹೆಚ್ಚಿನ ಪ್ರಕರಣಗಳು ನ್ಯಾಯಾಲಯದ ಹೊರಗಡೆ ಯೇ ಸುಗಮವಾಗಿ ಇತ್ಯರ್ಥವಾಗಲಿವೆ ಎಂಬ ಆಶಯ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್.ಹೊಸಮನೆ ಸೇರಿದಂತೆ ಬಳ್ಳಾರಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ನೂತನವಾಗಿ ಆಯ್ಕೆಯಾದ ಮಧ್ಯಸ್ಥಿಕೆದಾರರು, ವಕೀಲರು ಮತ್ತು ನ್ಯಾಯಾಂಗ ಅಧಿಕಾರಿಗಳು ಉಪಸ್ಥಿತರಿದ್ದರು.

ಹಿರಿಯ ನಾಗರೀಕರಿಗೆ ಶ್ರೀ ರಾಮಕೃಷ್ಣ ಗುರುಕುಲ ಶಾಲೆಯಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರ ಯಶಸ್ವಿ

ರಾಯಚೂರು,ಮಾ.26-

ಕೆ.ರಾಮಕೃಷ್ಣ MS ಶ್ರೀ ಲಕ್ಷ್ಮಿನಾರಾಯಣ ನರ್ಸಿಂಗ್ ಹೋಂ ಇವರ ನೇತೃತ್ವದಲ್ಲಿ ಹಿರಿಯ ನಾಗರೀಕರಿಗೆ ಉಚಿತ ಆರೋಗ್ಯ ಶಿಬಿರ ಏರ್ಪಡಿಸಿತ್ತು. ಈ ಶಿಬಿರದಲ್ಲಿ ಡಾ॥ ಎಂ. ವರುಣ M.D, General Medicine, ಡಾ॥ ಪಾವನಿ MS, DGO Ayurvedic Gynecologist ಹಾಗೂ 5 ಜನ ನರ್ಸ್ ಸಿಬ್ಬಂದಿಗಳು ಆಗಮಿಸಿದ್ದರು.

ಆಗಮಿಸಿದ ರೋಗಿಗಳನ್ನು ದೀರ್ಘವಾಗಿ ಪರಿಕ್ಷೀಸಿ ಆರೋಗ್ಯ ಶಮನಕ್ಕೆ ಪರಿಹಾರ ನೀಡುತ್ತಿದ್ದರು. ಅನೇಕರು ರಕ್ತದ ಒತ್ತಡದಿಂದ ಸಕ್ಕರೆ ಕಾಯಿಲೆಯಿಂದ ಬಳಲುತ್ತಿರುವವರು ಬೆನ್ನು ನೋವು, ಕೀಲುನೋವು ಹಾಗೂ ಕೈಕಾಲಲ್ಲಿ ಶಕ್ತಿ ಇಲ್ಲದೆ ಬಳಲುತ್ತಿರುವವರು ಆಗಮಿಸಿ ತಮ್ಮ ಆರೋಗ್ಯವನ್ನು ಸರಿಯಾಗಿಟ್ಟುಕೊಳ್ಳಬೇ ಕೆನ್ನುವುದು ಕೆಲವರಿಗೆ ಔಷಧೋಪಚಾರ ನೀಡಿದರೆ ಕೆಲವರಿಗೆ ಯೋಗದಿಂದ ಕಾಯಿಲೆ ಗುಣಪಡಿ



ಸಿಕೊಳ್ಳುವ ವಿಧಾನವನ್ನು ವೈದ್ಯರು ಸ್ವತಃ ಯೋಗದ ವಿಧಾನವನ್ನು ತೋರಿಸಿ ನಿರಂತರ ಮಾಡಬೇಕೆಂದು ಸಲಹೆ ನೀಡಿದರು. ಕೆಲ ರೋಗಿಗಳಿಗೆ ಕೆಲ ಅವಧಿಯ ನಂತರ ವೈದ್ಯರನ್ನು ಪುನಃ ಭೇಟಿಯಾಗಿ ಪರೀಕ್ಷಿಸಿಕೊಳ್ಳಲು ತಿಳಿಸುತ್ತಿದ್ದರು. ಈ ಶಿಬಿರಕ್ಕೆ ಆಗಮಿಸಿದ ಹಿರಿಯ ನಾಗರೀಕರನ್ನು ವಿಚಾರಿಸಿದಾಗ ತಮ್ಮ ಅನುಭವ ತಿಳಿಸಿದ್ದಲ್ಲದೆ ಇಂತಹ ಶಿಬಿರಗಳು ಮತ್ತೊಮ್ಮೆ ಹಮ್ಮಿಕೊಳ್ಳಲು ಸಲಹೆ ನೀಡುತ್ತಿದ್ದರು. ತಮ್ಮ ಅನುಭವ ತಿಳಿಸಿದ್ದಲ್ಲದೆ. ಟ್ರಸ್ಟ್ ಸದಸ್ಯರು ಮತ್ತು 18 ಮಹಿಳೆಯರು, ಹಿರಿಯ ನಾಗರಿಕರು ಸೇರಿದಂತೆ ಒಟ್ಟು 50 ಜನರಿಗೆ ತಪಾಸಣೆ ಕೈಗೊಳ್ಳಲಾಯಿತು. ಹಿರಿಯರಾದ ಸಿ.ಗೋವಿಂದಪ್ಪ ಶೆಟ್ಟಿ, ಕೆ.ವಿ. ಮನೋಹರ, ವೀರಂ ಲಕ್ಷ್ಮಿನಾರಾಯಣ ಶಿಬಿರದ ಕಾರ್ಯ ವನ್ನು ವೀಕ್ಷಿಸಿ ಶ್ಲಾಘನೆ ವ್ಯಕ್ತಪಡಿಸಿದರು. ಮುಖ್ಯೋಪಾಧ್ಯಾಯಿನಿ ವೀರಜಾ ಬ್ಯಾಗವಟ ವ್ಯವಸ್ಥೆಯನ್ನು ಚೊಕ್ಕಟವಾಗಿ ಏರ್ಪಡಿಸಿದ್ದರು. ಬಿ.ಶ್ರೀಧರ, ಗಾರಾ ಶಾಮಸುಂದರ, ಕೊಂಡ ವೆಂಕಟೇಶ ಶಿಬಿರದ ಕಾರ್ಯದುದ್ದಕ್ಕೂ ಸಹಕರಿಸಿದರು. ಕಾಯಾ, ವಾಚಾ, ಮನಸಾದಿಂದ ಪರೀಕ್ಷಿಸಿ ವೈದ್ಯಕೀಯ ಸಲಹೆ ನೀಡಿದ ವೈದ್ಯರುಗಳಿಗೆ ಅಧ್ಯಕ್ಷ ಶ್ರೀ ಕೊಂಡ ಪ್ರಕಾಶ ಶ್ಲಾಘನೆ ವ್ಯಕ್ತಪಡಿಸಿ ಧನ್ಯವಾದಗಳನ್ನು ತಿಳಿಸಿದರು.

ಬೇಸಿಗೆ ಬಂತು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆ



ಕಲಬುರಗಿ,ಮಾ.26-

ಕಲಬುರಗಿ ಜಿಲ್ಲಾಡಳಿತವು ಬೇಸಿಗೆಯ ಸವಾಲುಗಳನ್ನು ಎದುರಿಸಲು ಸಂಪೂರ್ಣ ಸನ್ನದ್ಧವಾಗಿದ್ದು, ಸಾರ್ವಜನಿಕರು ಬಿಸಿಲಿನ ತಾಪದಿಂದ ರಕ್ಷಿಸಿಕೊಳ್ಳಲು ಅಗತ್ಯ ಮುನ್ನೆಚ್ಚರಿಕೆಗಳನ್ನು ವಹಿಸಬೇಕೆಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಮಿತಿಯ ಅಧ್ಯಕ್ಷರೂ ಆಗಿರುವ ಬಿ. ಫೌಜಿಯಾ ತರುನ್ನಮ್ ಅವರು ಮನವಿ ಮಾಡಿದರು.

ಇಂದು ಜಿಲ್ಲಾಧಿಕಾರಿಗಳ ಕಚೇರಿ ಯಲ್ಲಿ ಹಮ್ಮಿಕೊಳ್ಳಲಾಗಿದ್ದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಮಿತಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು ಜಿಲ್ಲೆಯಲ್ಲಿ ಕುಡಿಯುವ ನೀರಿನ ಲಭ್ಯತೆ, ಮೇವಿನ ಸಂಗ್ರಹ ಮತ್ತು ಬೇಸಿಗೆಯ ಶಾಖದ ಅಲೆ ಎದುರಿಸುವ ಕುರಿತು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯಲ್ಲಿ ಜನವರಿ 01 ರಿಂದ ಮಾರ್ಚ್ 25, 2026 ರವರೆಗೆ ವಾಡಿಕೆ ಮಳೆಗಿಂತ (12.8 ಮಿ.ಮಿ) ಶೇ. 180% ರಷ್ಟು ಹೆಚ್ಚು ಅಂದರೆ ಒಟ್ಟು 35.9 ಮಿ.ಮಿ ಹೆಚ್ಚುವರಿ ಮಳೆಯಾ ಗಿರುತ್ತದೆ. ಕುಡಿಯುವ ನೀರಿಗೆ ಸಂಬಂಧಿಸಿದಂತೆ ಪ್ರಸಕ್ತ ಸಾಲಿನಲ್ಲಿ ಯಾವುದೇ ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸದ ಕಾರಣ, ಟ್ಯಾಂಕರ್ ನೀರು ಸರಬರಾ ಜಿಗೆ ಎಸ್.ಡಿ.ಆರ್.ಎಫ್. (SD RF) ಅನುದಾನ ಲಭ್ಯವಿರುವುದಿಲ್ಲ ಎಂದು ತಿಳಿಸಿದರು.

ಮುಂಬರುವ ಬೇಸಿಗೆಗೆ ಜಿಲ್ಲೆಯ ಗ್ರಾಮೀಣ ಮತ್ತು ನಗರ ಪ್ರದೇಶಗಳ ಜನ-ಜಾನುವಾರುಗಳಿಗಾಗಿ ಒಟ್ಟು 4 ಟಿ.ಎಂ.ಸಿ (TMC) ನೀರಿನ ಅವಶ್ಯಕತೆಯಿದ್ದು,

ಈ ಪ್ರಮಾಣದ ನೀರನ್ನು ಕಾಯ್ದಿರಿಸಲು ನೀರಾವರಿ ಸಲಹಾ ಸಮಿತಿಗೆ ಬೇಡಿಕೆ ಸಲ್ಲಿಸಲಾಗಿದೆ ಎಂದು ತಿಳಿಸಿದ ಅವರು ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ವೆಚ್ಚವನ್ನು ಗ್ರಾಮ ಪಂಚಾಯತ್ನ 15ನೇ ಹಣ ಕಾಸು ಯೋಜನೆಯಡಿ ಭರಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯ ಪ್ರಮುಖ ಜಲಾಶಯಗಳಾದ ಅಮರ್ಜಾ (79.86%), ಬೆಣ್ಣೆತೋರಾ (80.99%), ಗಂಡೋರಿ ನಾಲಾ (75.94%) ಮತ್ತು ಕೆಳ ಮುಲ್ಲಾಮಾರಿ (77.53%) ಗಳಲ್ಲಿ ಉತ್ತಮ ನೀರಿನ ಸಂಗ್ರಹವಿದೆ. ಜಿಲ್ಲೆಯಲ್ಲಿ ಪ್ರಸ್ತುತ ಲಭ್ಯವಿರುವ ಮತ್ತು ಉತ್ಪಾದನೆಯಾಗಲಿರುವ ಮೇವು ಮುಂದಿನ 45 ವಾರಗಳವರೆಗೆ ಸಾಕಾಗುವಷ್ಟಿದೆ. ಹೀಗಾಗಿ ಜಿಲ್ಲೆಯಲ್ಲಿ ಮೇವಿನ ಕೊರತೆ ಇರುವುದಿಲ್ಲ ಎಂದರು.

ಶಾಖದ ಅಲೆ ಮುನ್ನೆಚ್ಚರಿಕೆ ಕ್ರಮವಾಗಿ ಜಿಲ್ಲಾ ಮಟ್ಟದಲ್ಲಿ ಶಾಖದ ಅಲೆ ಕ್ರಿಯಾ ಯೋಜನೆ ಸಿದ್ಧಪಡಿ ಸಲಾಗಿದ್ದು, ಸಾರ್ವಜನಿಕರಿಗೆ ಕನ್ನಡದಲ್ಲಿ ಕೈಪಿಡಿ (IEC) ಮುದ್ರಿಸಿ ವಿತರಿಸುವ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ.

ಬಿಸಿಲು ತಾಪದಿಂದ ರಕ್ಷಿಸಿಕೊಳ್ಳಲು ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ (MGNREGA) ಯೋಜನೆಯ ಕೆಲಸದ ಅವಧಿಯನ್ನು ಬದಲಾಯಿಸಲು ಸೂಚಿಸಲಾಗಿದೆ. ಆರೋಗ್ಯ ಕೇಂದ್ರಗಳಲ್ಲಿ ಅಗತ್ಯ ಔಷಧಿಗಳು, ಓ.ಆರ್.ಎಸ್ (ORS) ಮತ್ತು ಐಸ್ ಪ್ಯಾಕ್ ಸೇರಿದಂತೆ ತುರ್ತು ಚಿಕಿತ್ಸಾ ಸೌಲಭ್ಯಗಳನ್ನು ಕಾಯ್ದಿರಿಸಲಾಗಿದೆ.

ಅಕಾಲಿಕ ಮಳೆಯಿಂದಾಗಿ ಜಿಲ್ಲೆಯಲ್ಲಿ ಸುಮಾರು 29.3 ಹೆಕ್ಟೇರ್ ತೋಟಗಾರಿಕಾ ಬೆಳೆ ಹಾನಿಯಾ ಗಿದ್ದು, 34 ರೈತರಿಗೆ ಒಟ್ಟು 6.015 ಲಕ್ಷ ರೂ.ಗಳ ಪರಿಹಾರ ಧನವನ್ನು ಅಂದಾಜಿಸಲಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಭಂವರ್ ಸಿಂಗ್ ಮೀನಾ, ಕಲಬುರಗಿ ಮಹಾನಗರ ಪಾಲಿಕೆ ಆಯುಕ್ತರಾದ ಅವಿನಾಶ್ ಶಿಂಧೆ, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ಜಿಲ್ಲೆಯ ವಿವಿಧ ತಾಲ್ಲೂಕುಗಳ ತಹಸೀಲ್ದಾರರು ಉಪಸ್ಥಿತರಿದ್ದರು.

27 ರಂದು ಮಹಿಳಾ ನೌಕರರ ಪ್ರಾತಿನಿಧ್ಯ ಕುರಿತು 'ವಿಚಾರ ಸಂಕಿರಣ'

ಬಳ್ಳಾರಿ,ಮಾ.26-

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಬಳ್ಳಾರಿ ಜಿಲ್ಲಾ ಶಾಖೆ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಸರ್ಕಾರಿ ಸೇವೆಯಲ್ಲಿ ಮಹಿಳಾ ನೌಕರರ ಪ್ರಾತಿನಿಧ್ಯ ಕುರಿತು ಮಾ.27 ರಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಆಸ್ಪತ್ರೆ ಆವರಣದ ಡಿ.ಎನ್.ಬಿ. ಸಭಾಂಗಣದಲ್ಲಿ ವಿಚಾರ ಸಂಕೀರಣ ಹಾಗೂ ಬಹುಮಾನ ವಿತರಣಾ ಕಾರ್ಯಕ್ರಮ ಆಯೋಜಿಸಲಾಗಿದೆ.

ಬೆಂಗಳೂರು ಅಪರ ಸಾರಿಗೆ ಆಯುಕ್ತ ಮಲ್ಲಿಕಾರ್ಜುನ ಅವರು ಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಘನ ಉಪಸ್ಥಿತಿ ಇರುವರು.

ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾ ಲಯದ ಸಹಾಯಕ ಪ್ರಾಧ್ಯಾಪಕಿ ಶ್ರೀದೇವಿ ಆಲೂರು ಅವರು ಕಾರ್ಯಕ್ರಮದ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡುವರು ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಉಪಾಧ್ಯಕ್ಷರು ಹಾಗೂ ಬಳ್ಳಾರಿ ಜಿಲ್ಲಾ ಶಾಖೆ ಜಿಲ್ಲಾಧ್ಯಕ್ಷ ಸದಾನಂದ ನೆಲ್ಕುದ್ರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪೆಟ್ರೋಲ್ ಡಿಸೇಲ್ ಸಮಸ್ಯೆ ಇಲ್ಲ ಸುಳ್ಳು ಸುದ್ದಿ ಹರಡಬೇಡಿ: ಡಿವೈಎಸ್ಪಿ ಜಾವಿದ್

ಸುರಪುರ,ಮಾ.25-

ತಾಲೂಕಿನ ಎಲ್ಲಿಯೂ ಪೆಟ್ರೋಲ್ ಮತ್ತು ಡೀಸೆಲ್ ಹಾಗೂ ಎಲ್‌ಪಿಜಿ ಗ್ಯಾಸ್ ಸಮಸ್ಯೆ ಇಲ್ಲ ಎಂದು ತಿಳಿಸಿದೆ. ಆದ್ದರಿಂದ ಸಾರ್ವಜನಿಕರು ಮಧ್ಯ ಪ್ರಾಚ್ಯದಲ್ಲಿನ ಯುದ್ಧ ದಿಂದ ಪೆಟ್ರೋಲ್ ಡೀಸೆಲ್ ಸಮಸ್ಯೆ ಕುರಿತು ಸುಳ್ಳು ವದಂತಿಯನ್ನು ಕಿವಿಗೊಡ ಬೇಡಿ ಎಂದು ಡಿವೈಎಸ್ಪಿ ಜಾವೀದ್ ಇನಾಂದಾರ್ ತಿಳಿಸಿದರು. ನಗರದ ತಮ್ಮ ಕಚೇರಿ ಆವರಣದಲ್ಲಿ ಪೆಟ್ರೋಲ್ ಬಂಕ್ ಮಾಲೀಕರುಗಳೊಂದಿಗೆ ಸಭೆ ನಡೆಸಿ ಮಾತನಾಡಿ, ಸಾರ್ವಜನಿಕರು ತಮ್ಮ ವಾಹನ ದೊಂದಿಗೆ ಬಂದಾಗ ಪೆಟ್ರೋ ಲ್ ಮತ್ತು ಡೀಸೆಲ್ ಹಾಕಬಹುದು ಆದರೆ ಬಿಡಿಯಾಗಿ ಡಬ್ಬಿ ಗಳಲ್ಲಿ ಬಾಟಲ್ ಮತ್ತು ಇತರೆ ಸಂಗ್ರಹಣೆಗೆ ಅವಕಾಶ ನೀಡಬೇಡಿ ಹಾಗೇನಾದರೂ ಬಿಡಿಯಾಗಿ ಪೆಟ್ರೋಲ್ ಮತ್ತು ಡೀಸೆಲ್ ಮಾರಾಟ ಮಾಡಿದಲ್ಲಿ ನಿಮ್ಮ ವಿರುದ್ಧವು ಕ್ರಮ ಕೈಗೊಳ್ಳಲಾಗುವುದು ಎಂದು ಪೆಟ್ರೋಲ್ ಬಂಕ್ ಮಾಲೀಕರುಗಳಿಗೆ ತಿಳಿಸಿದರು. ಸುಳ್ಳು ಸುದ್ದಿಯಿಂದಾಗಿ ಪೆಟ್ರೋಲ್ ಬಂಕ್ ಗಳ ಮುಂದೆ ಹೆಚ್ಚಿನ ಸಂಖ್ಯೆ ಯಲ್ಲಿ ವಾಹನಗಳು ಜಮಾವಣೆ ಆಗುತ್ತಿವೆ ಇದಕ್ಕೆ ಬಿಡಿಯಾಗಿ ಮಾರಾಟ ಮಾಡುವುದು ಕೂಡ ಕಾರಣವಾಗಿದೆ ಆದ್ದರಿಂದ ಕೇವಲ ವಾಹನಗಳಿಗೆ



ಮಾತ್ರ ಇಂಧನವನ್ನು ಹಾಕಬೇಕು ಇತರೆ ಮಾರಾಟ ಮಾಡ ಬಾರದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಪೆಟ್ರೋಲ್ ಬಂಕ್ ಗಳ ಮಾಲೀಕರುಗಳು ಮಾಹಿತಿ ನೀಡಿ, ನಮ್ಮಲ್ಲಿ ಪೆಟ್ರೋಲ್ ಮತ್ತು ಡೀಸೆಲ್ಗೆ ಕೊರತೆ ಇಲ್ಲ ಸಾರ್ವಜನಿಕರು ಸುಳ್ಳು ಸುದ್ದಿಗಳಿಗೆ ಕಿವಿಗೊಡದೆ ತಮಗೆ ಬೇಕಾದಷ್ಟು ಇಂಧನವನ್ನು ವಾಹನಗಳಿಗೆ ತುಂಬಿಸಿಕೊಳ್ಳಬಹುದು ಎಂದು ತಿಳಿಸಿದರು. ಎಲ್ಲಾ ಬಂಕ್ ಗಳಲ್ಲಿ ಅಗತ್ಯವಿರುವಷ್ಟು ಸಂಗ್ರಹಣೆ ಲಭ್ಯವಿದೆ ಆದ್ದರಿಂದ ಯಾವುದೇ ವಾಹನಗಳ ಮಾಲೀಕರು ಆತಂಕಕ್ಕೆ ಒಳಗಾಗಬೇಡಿ ಎಂದು ತಿಳಿಸಿದ್ದಾರೆ. ಇದೇ ಸಂದರ್ಭದಲ್ಲಿ ಎಲ್‌ಪಿಜಿ ಗ್ಯಾಸ್ ವಿತರಕರಿಗೂ ಎಚ್ಚರಿಕೆ ನೀಡಿ, ವಿನಾಕಾರಣ ಗ್ಯಾಸ್ ವಿತರಣೆಯಲ್ಲಿ ಅಡಚಣೆ ಉಂಟು ಮಾಡದೇ ಬುಕಿಂ ಗ್ ಆರಂಭಿಸಿ ನಿಯಮದ ಪ್ರಕಾರ ಗ್ಯಾಸ್ ವಿತರಣೆ ಮಾಡುವಂತೆ ತಿಳಿಸಿದ್ದಾರೆ. ಗ್ಯಾಸ್ ವಿತರಕರೂ ಕೂಡ ಮಾಹಿತಿ ನೀಡಿ ಇಂದಿನಿಂದ ಹೆಲ್ಪ್ ಲೈನ್ ಮೂಲಕ ಬುಕಿಂಗ್ ಕೂಡ ಆರಂಭಿಸಲಾಗಿದ್ದು ಮನೆಗಳಿಗೆ ವಿತರಣೆ ಮಾಡಲಾಗುವುದು, ಆದರೆ ವಾಣಿಜ್ಯ ಬಳಕೆಯ ಸಿಲಿಂಡರ್ ಸರಬ ರಾಜುವಿನ ಕೊರತೆ ಇದ್ದು ಅವುಗಳನ್ನು ಸರಕಾರದ ನಿಯಮದಂತೆ ವಿತರಣೆ ಮಾಡಲಾಗುವುದು ಎಂದು ವ್ಯಾಪಾರಸ್ಥರಿಗೆ ತಿಳಿಸಿದ್ದಾರೆ.

ಇದೇ ಸಂದರ್ಭದಲ್ಲಿ ಸುರಪುರ ಠಾಣೆಯ ಪಿ ಐ ಉಮೇಶ ಎಂ ಎಂ ನಾಯಕ ಉಪಸ್ಥಿತರಿದ್ದು ಮಾತನಾಡಿ, ಯಾವುದೇ ಬಂಕ್‌ಗಳಲ್ಲಿ ವಿನಾಕಾರಣ ಹೆಚ್ಚಿನ ಬೆಲೆಗೆ ಮಾರಾಟ ಮಾಡಿದ್ದು ಕಂಡು ಬಂದಲ್ಲಿ ಅಂತಹ ಬಂಕ್‌ಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು. ಅಡುಗೆ ಅನಿಲ ವಿತರಣೆಯು ಕೂಡ ಹೆಚ್ಚಿನ ಬೆಲೆಗೆ ಕಾಳಸಂತೆಯಲ್ಲಿ ಮಾರಾಟ ಮಾಡಿದಲ್ಲಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಎಲ್ಲಾ 9 ಪೆಟ್ರೋಲ್ ಬಂಕ್‌ಗಳ ಮಾಲೀಕರು ಎಲ್ಪಿಜಿ ವಿತರಕರು ಭಾಗವಹಿಸಿದ್ದರು.

ಒಂದನೇಯ ಪುಟದಿಂದ

ಯೋಜನೆಯಡಿ ಡೆಬಿಟ್ ಕಾರ್ಡ ನೀಡುವ ಹೆಸರಿನಲ್ಲಿ ಮಹಿಳೆಯರಿಂದ ಹಣವಸೂಲಿ ಆರೋಪ: ಪ್ರತಿಭಟನೆ

ಮಹಿಳೆಯರ ಬ್ಯಾಂಕ್ ಖಾತೆ, ಆಧಾರ ಸಂಖ್ಯೆಯೊಂದಿಗೆ ದಾಖಲೆ ನೀಡುವದಾಗಿ ಸರ್ಕಾರದಿಂದಯಾವುದೇ ಪೂರ್ವಾನುಮತಿ ಪಡೆಯದೇ ಖಾಸಗಿ ಸಂಸ್ಥೆಯೊಂದು ನೂರಾರು ಮಹಿಳೆಯರಿಂ ತಲಾ 400 ರೂ ಸಂಗ್ರಹಿಸುತ್ತಿದೆ.ನಿತ್ಯವೂ ಮಹಿಳೆಯರು ಆಗಮಿಸಿ ಖಾತೆ ಜೋಡಣೆ ಮಾಡಿಸಿದರೆ ಮಾತ್ರ ಹೊಲಿಗೆ ಯಂತ್ರ ನೀಡುವದಾಗಿ ನಂಬಿಸಲಾಗಿತ್ತು ಎಂದು ಹೇಳಲಾಗಿದೆ. ಕೇಂದ್ರ ಸರ್ಕಾರಿಂದ ಅನುಷ್ಠಾನಗೊಳಿಸಲಾಗಿರುವ ವಿಶ್ವಕರ್ಮ ಯೋಜನೆಯಡಿ ಯಾವುದೇ ಸಂಸ್ಥೆಯನ್ನು ನೇಮಿಸದೇ ಇದ್ದರೂ ಅನಧಿಕೃತವಾಗಿ ಹಣ ಸಂಗ್ರಹಿಸಿರುವ ಆರೋಪ ಕೇಳಿಬಂದಿದೆ. ಫಲಾನುಭವಿಗಳಿಂದ 400 ರೂ ಸಂಗ್ರಹಕ್ಕೆ ಯಾರು ಅನುಮತಿ ನೀಡಿದ್ದಾರೆ ಎಂಬುದು ನಿಗೂಢವಾಗಿಯೇ ಉಳಿದಿದೆ.ಯೋಜನೆ ನೂಡೆಲ್ ಇಲಾಖೆಯಾಗಿ ಜಿಲ್ಲಾ ಕೈಗಾರಿಕಾ ಇಲಾಖೆ ಕಾರ್ಯನಿರ್ವಹಿಸುತ್ತಿದ್ದು ಅನೇಕರು ಇಲಾಖೆಗೆ ಮೌಖಿಕ ದೂರು ನೀಡಿದರೂ ಕೈಗಾರಿಕೆ ಇಲಾಖೆ ಅಧಿಕಾರಿಗಳು ಮೌನವೂ ಸಹ ಅನುಮಾನಕ್ಕೆ ದಾರಿ ಮಾಡಿದೆ ಎಂಬ ದೂರು ಕೇಳಿಬಂದಿದೆ.

ಬೀಗ ಹಾಕಿ ಕೇಸ್ : ಪ್ರಕರಣದ ಕುರಿತಂತೆ ಜಿಲ್ಲಾಧಿಕಾರಿ ನಿತೀಶ ಇವರ ಗಮನಕ್ಕೆ ಬಂದಿದ್ದು ಕೈಗಾರಿಕೆ ಇಲಾಖೆ ಅಧಿಕಾರಿಗಳು ಪರಿಶಿಲಿಸಿ ಬೀಗ ಹಾಕಲುಸೂಚನೆ ನೀಡಿದ್ದಾರೆ. ಹಣವಸೂಲಿ ಮಾಡುತ್ತಿರುವ ಸಂಸ್ಥೆಯ ವಿರುದ್ದ ನೂರಾರು ಮಹಿಳೆಯರು ಜಿಲ್ಲಾ ಪಂಚಾಯ್ತಿ ಕಚೇರಿಗೆ ಹೋಗಿ ದೂರು ನೀಡಿದ್ದರಿಂದ ಸಹಾಯಕ ಆಯುಕ್ತರು ಸ್ಥಳಕ್ಕೆ ತೆರಳಿ ಕಚೇರಿಯನ್ನು ಬೀಗ ಹಾಕಿ ವರದಿ ನೀಡುವಂತೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದ್ದಾರೆ. ಸಹಾಯಕ ಆಯುಕ್ತ ಡಾ.ಹಂಪಣ್ಣ ಸಜ್ಜನ ನೇತೃತ್ವದಲ್ಲಿ ಕೈಗಾರಿಕಾ ಇಲಾಖೆ ಅಧಿಕಾರಿಗಳು ಕಚೇರಿ ತಪಾಸಣೆ ನಡೆಸುತ್ತಿದ್ದಾರೆ. ಇಲ್ಲಿಯವರೆಗೆ ಫಲಾನುಭವಿಗಳಿಂದ ಸಂಗ್ರಹಿಸಿದ ಹಣದ ಮಾಹಿತಿ ಪಡೆಯುತ್ತಿದ್ದಾರೆ ಎಂದು ಹೇಳಲಾಗಿದೆ. ಅಕ್ರಮವಾಗಿ ಕಳೆದ ನಾಲ್ಕೈದು ತಿಂಗಳಿನಿಂದ ಹಣ ಸಂಗ್ರಹಿಸುತ್ತಿರುವ ಕುರಿತು ಮಾಹಿತಿ ಪಡೆದ ಸಂಸ್ಥೆ ಪದಾಧಿಕಾರಿಗಳ ವಿರುದ್ದ ಕೇಸ್ ದಾಖಲಿಸುವ ಕುರಿತು ಪರಿಶೀಲಿಸಲಾಗುತ್ತಿದೆ ಎಂದು ಹೇಳಲಾಗಿದೆ. ಏಕಾಏಕಿ ಸಂಸ್ಥೆಯವರು ಸರ್ವರ್ ಡೌನ್ ಆಗಿದೆ. ಬರಬೇಡಿ ಎಂದುಹೇಳಿ ಕಳುಹಿಸುತ್ತಿದ್ದಾರೆ ಎಂದು ಫಲಾನುಭವಿಗಳು ದೂರುತ್ತಿದ್ದಾರೆ.

ಯಾರಿಗೂ ಕರೆದಿಲ್ಲ: ಸಂಸ್ಥೆಯ ಮುಖ್ಯಸ್ಥರಾದ ಮಾರೆಪ್ಪ ಮತ್ತು ರೇಷ್ಮಾ ಮಾಹಿತಿ ನೀಡಿ, ಯಾವ ಫಲಾನುಭವಿಗೂ ಕರೆದಿಲ್ಲ. ಅವರೇ ಬಂದಿದ್ದಾರೆ. ಬ್ಯಾಂಕ್ ಖಾತೆ, ಆಧಾರ ಜೋಡಣೆ ಸೇರಿ ಮಾಹಿತಿ ಕ್ರೋಢೀಕರಿಲಾಗುತ್ತಿದೆ. ಪ್ರತಿ ಫಲಾನುಭವಿಯಿಂದ 400ರೂ.ತೆಗೆದುಕೊಳ್ಳುತ್ತಿರುವುದು ಟೈಡ್ ಎನ್ನುವ ಯುಪಿಐ ಆ್ಯಪ್ ನಲ್ಲಿ ನೊಂದಣಿ ಮಾಡಿಕೊಟ್ಟು, ಅವರ ಖಾತೆಗೆ ಹಾಕಲಾಗುತ್ತದೆ. ಅವರಿಗೆ ಡೆಬಿಟ್ ಕಾರ್ಡ್ ಕೂಡ ನೀಡಲಾಗುತ್ತದೆ ಎಂದರು. ಕಂಪನಿಯಿಂದ ಯಾವುದೇ ಹೊಲಿಗೆ ಯಂತ್ರ ನೀಡುತ್ತಿಲ್ಲ, ತರಬೇತಿಯೂ ನೀಡುತ್ತಿಲ್ಲ. ತರಬೇತಿ ಈಗಾಗಲೇ ಮುಗಿದಿದೆ ಎಂದು ಹೇಳಿದರು.

ಕಂಪನಿ ಕಚೇರಿಗೆ ಸಹಾಯಕ ಆಯುಕ್ತ ಭೇಟಿ: ಈ ಘಟನೆ ಸಂಬಂಧ ಜನರು ಜಿಲ್ಲಾ ಪಂಚಾಯತ್ ಎದುರು ಜಮಾಯಿಸಿದ ಹಿನ್ನಲೆಯಲ್ಲಿ ಡಿಸಿ ಅವರು ಇದನ್ನು ಗಮನಿಸಿ, ಸಂಸ್ಥೆಯ ಬಗ್ಗೆ ತನಿಖೆ ನಡೆಸಲು ಸಹಾಯಕ ಆಯುಕ್ತ ಹಂಪಣ್ಣ ಸಜ್ಜನ್, ಕೈಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಸತೀಶ, ಸದರ ಬಜಾರ್ ಪೊಲೀಸ್ ಠಾಣೆಯ ಪಿಐ ಉಮೇಶ ಕಾಂಬ್ಳೇ ಸೇರಿ ಅಧಿಕಾರಿಗಳ ತಂಡವನ್ನು ರಚಿಸಿ, ಪರಿಶೀಲಿಸಲು ತಿಳಿಸಿದ್ದು, ಸಂಸ್ಥೆಯ ಕಚೇರಿಗೆ ಅಧಿಕಾರಿಗಳ ತಂಡ ಭೇಟಿ ನೀಡಿ, ಕಂಪನಿಯ ಮುಖ್ಯಸ್ಥರಿಗೆ ಕಾರ್ಯಚಟುವಟಿಕೆ ನಡೆಸುತ್ತಿರುವ ಕುರಿತು ಅಧಿಕೃತ ಪರವಾನಿಗೆ ಪತ್ರ, ಸೌಲಭ್ಯಗಳ ಕುರಿತು ಪ್ರಚಾರ ಪಡಿಸಿದ ಪ್ರತಿ, ನಡೆಸುತ್ತಿರುವ ಕಾರ್ಯಚಟುವಟಿಕೆಗೆ ಸಂಬಂಧಪಟ್ಟ ಇಲಾಖೆಯಿಂದ ಪರವಾನಿಗೆ ಪಡೆದಿದ್ದರೆ ಅಥವಾ ಇಲಾಖೆಯಿಂದ ಅನುಮತಿ ನೀಡಿದ್ದರೆ ಅದರ ಪ್ರತಿ, ಫಲಾನುಭವಿಗಳನ್ನು ಯಾವ ಮೂಲದಿಂದ ಆಯ್ಕೆ ಮಾಡಿದ್ದೀರಿ ಎಂಬ ಕುರಿತು ಮಾಹಿತಿಯನ್ನು ಕೇಳಿದರು. ಅದಕ್ಕೆ ಕಂಪನಿಯ ಮುಖ್ಯಸ್ಥರು, ತಡಬಡಾಯಿಸಿ, ನಂತರ ದಾಖಲಾತಿಯ ಕಡತವೊಂದನ್ನು ತಂದು ಸಹಾಯಕ ಆಯುಕ್ತರ ಮುಂದೆ ಇಟ್ಟರು. ನಂತರ ದಾಖಲಾತಿಗಳನ್ನು ಪರಿಶೀಲಿಸಿ, ಇದನ್ನು ಉನ್ನತ ಮಟ್ಟದಲ್ಲಿ ತನಿಖೆ ನಡೆಸಿ, ಲೋಪಗಳು ಕಂಡು ಬಂದರೆ, ಸಂಸ್ಥೆಯಿಂದ ಜನರಿಗೆ ಮೋಸ ಆಗಿದ್ದರೆ. ಅಥವಾ ಆಗುವುದಾದರೆ ಸಂಸ್ಥೆಯ ವಿರುದ್ದ ಎಫ್ಐಆರ್ ದಾಖಲಿಸಲಾಗುತ್ತದೆ ಎಂದು ಉಳಿದ ಅಧಿಕಾರಿಗಳೊಂದಿಗೆ ಚರ್ಚಿಸಿದರು. ಪರಿಶೀಲನೆ ಮುಂದುವರೆದಿದೆ. ಜಿಲ್ಲೆಯ ಬೇರೆ ಊರುಗಳಿಂದ ಆಗಮಿಸಿರುವ ಮಹಿಳೆಯರು ಕಾದುಕುಳಿತಿದ್ದಾರೆ.

ನಿಯಮ ಉಲ್ಲಂಘ : ಆರ್‌ಡಿಸಿಸಿ ಬ್ಯಾಂಕ್ ನಿರ್ದೇಶಕರ ವಜಾಗೆ ಬಸವರಾಜ ಒತ್ತಾಯ

ಪ್ರಾಧಿಕಾರ ಕ್ರಮ ಕೈಗೊಂಡು, ಸಂಬಂಧಪಟ್ಟ ನಿರ್ದೇಶಕರನ್ನು ಹುದ್ದೆಯಿಂದ ವಜಾಗೊಳಿಸಬೇಕು ಎಂದು ಒತ್ತಾಯಿಸಿದರು.

ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಹೋರಾಟವನ್ನು ತೀವ್ರಗೊಳಿಸುವುದಾಗಿ ಎಚ್ಚರಿಕೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಭೀಮರಾಯ ಜರದಬಂಡಿ, ಶಿವಪ್ಪ ಬಲ್ಲಿದವ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಪೆಟ್ರೋಲ್ ಕೊರತೆ ಆತಂಕ: ರಾಯಚೂರಿನಲ್ಲಿ ಬಂಕ್‌ಗಳ ಮುಂದೆ ವಾಹನಗಳ ಸಾಲು

ಸಂಗ್ರಹ ಮಾಡಿಕೊಳ್ಳಲು ಮುಂದಾದರು.

ಆದರೆ ವದಂತಿಗಳ ಕುರಿತು ಸ್ಪಷ್ಟನೆ ನೀಡಬೇಕಾದ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಮೌನ ವಹಿಸಿದ್ದು, ಜನರ ಗೊಂದಲಕ್ಕೆ ಕಾರಣವಾಯಿತು.

ಆರೋಗ್ಯಕರ ಜೀವನಕ್ಕೆ ಪೌಷ್ಟಿಕ ಆಹಾರ ಮತ್ತು ವ್ಯಾಯಾಮ ಅಗತ್ಯ - ಡಾ ನೇಹಾ ಸುಖಾಣಿ

ತಡೆಯಬಹುದು ಎಂದು ಅಧ್ಯಕ್ಷೀಯ ನುಡಿಗಳನ್ನಾಡಿದರು.

ಕಾರ್ಯಕ್ರಮದಲ್ಲಿ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ರೂಪಾ ಪ್ರಾರ್ಥಿಸಿದರು. ಸೂಕ್ಷ್ಮ ಜೀವಶಾಸ್ತ್ರ ವಿಭಾಗದ ಮುಖ್ಯಸ್ಥರು ಹಾಗೂ ಮಹಿಳಾ ಕಲ್ಯಾಣ ವೇದಿಕೆಯ ಅಧ್ಯಕ್ಷರಾದ ಡಾ.ಕಮಲಾ ನವರತ್ನ ಪ್ರಾಸ್ತಾವಿಕವಾಗಿ ಮಾತನಾಡಿದರು. ಹಿಂದಿ ವಿಭಾಗದ ಮುಖ್ಯಸ್ಥರು ಹಾಗೂ ಮಹಿಳಾ ಕಲ್ಯಾಣ ವೇದಿಕೆಯ ಕಾರ್ಯದರ್ಶಿಗಳಾದ ಡಾ.ಅರುಣಾ ಹಿರೇಮಠ ಡಾ ನೇಹಾ ಸುಖಾಣಿ ಇವರ ಪರಿಚಯ ಮಾಡಿಕೊಟ್ಟರು. ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಸ್ವಾತಿ ದೀಕ್ಷಿತ್ ನಿರೂಪಿಸಿದರು. ಗಣಿತಶಾಸ್ತ್ರ ವಿಭಾಗದ ಉಪನ್ಯಾಸಕರಾದ ಶ್ರೀಮತಿ ಯುರೇಖಾ ಸ್ವಾಗತಿಸಿದರೆ, ಬಯೋಟೆಕ್ನಾಲಜಿ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಹೇಮಲತಾ ವಂದಿಸಿದರು.

ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಧ್ಯಾಪಕರು, ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಕಾರ್ಯಕ್ರಮದ ಲಾಭವನ್ನು ಪಡೆದುಕೊಂಡರು.

ಕೆ.ಎಸ್.ಎನ್ ಸೇವಾ ಸಮಿತಿಯಿಂದ ಸಾರ್ವಜನಿಕ ಆಸ್ಪತ್ರೆಯ ಮುಂದೆ ಕುಡಿಯುವ ನೀರಿನ ಅರವಂಟಿಗೆ ಉದ್ಘಾಟನೆ

ವಿದ್ಯಾರ್ಥಿಗಳು, ಕಾರ್ಮಿಕರು, ರೈತರು, ದಿನನಿತ್ಯ ಗ್ರಾಮೀಣ ಪ್ರದೇಶದಿಂದ ಬರುವ ಜನರಿಗೆ ಅನುಕೂಲಕ್ಕಾಗಿ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದ್ದು, ಕೆ.ಎಸ್.ಎನ್ ಸೇವಾ ಸಮಿತಿ ವತಿಯಿಂದ ನಮ್ಮ ತಾಲೂಕಿನಲ್ಲಿ ಸಾಮಾಜಿಕ ಕಾರ್ಯ ನಡೆದಿರುವುದು ಅತ್ಯಂತ ಖುಷಿಕರ ಸಂಗತಿಯಾಗಿದೆ ದೇವದುರ್ಗ ಪಟ್ಟಣದಲ್ಲಿ ಸಾರ್ವಜನಿಕ ಆಸ್ಪತ್ರೆ ಹತ್ತಿರ ಜೊತೆಗೆ 3 ಕಡೆ ನೀರಿನ ಅರವಟ್ಟಿಗೆ ಕಾರ್ಯಕ್ರಮದ ವ್ಯವಸ್ಥೆ ಮಾಡಲಾಗಿದೆ ಜೊತೆಗೆ ಬೇಸಿಗೆ ತಾಪಮಾನ ತೀವ್ರವಾಗುತ್ತಿರುವ ಹಿನ್ನೆಲೆಯಲ್ಲಿ ಜನಸೇವೆ ಮುಖ್ಯ ಉದ್ದೇಶವಾಗಿದ್ದು, ಪ್ರತೀ ವರ್ಷವೂ ಕಲ್ಯಾಣ ಕರ್ನಾಟಕದಾದ್ಯಂತ ಸಾಮಾಜಿಕ ಸೇವೆಯ ಕಾರ್ಯ ಚಟುವಟಿಕೆಗಳು ನಡೆಯುತ್ತಿದು ಅನೇಕ ರೀತಿಯ

ಸೇವಾ ಕಾರ್ಯಗಳನ್ನು ಮುಂದುವರಿಸಲಾಗುತ್ತಿದೆ ಈಗಾಗಲೇ ಸುಮಾರು ವರ್ಷಗಳಿಂದ ಸಾಮಾಜಿಕ ಕಾರ್ಯ ಚಟುವಟಿಕೆಯಲ್ಲಿ ತೊಡಗಿಕೊಂಡಿವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಹಿರಿಯ ಮುಖಂಡರಾದ ಸಿದ್ದನಗೌಡ ಚಿಂತಲಕುಂಟೆ, ಭೀಮನಗೌಡ ಮೇಟಿ,ನಾಗಪ್ಪ ನಾಡದಾಳ,ಶಿವರಾಜ ಗೂಗೆರದೊಡ್ಡಿ, ನಾಗಪ್ಪ ಉಪ್ಪಾರ್, ನಾಗರಾಜ ಗೂಗಿ ,ಬಸವರಾಜ್ ಅಕ್ಕರಿಕಿ,ಬಸನಗೌಡ ಮುಲ್ಕಿ,ಸುನಿಲ್ ಮಡಿವಾಳ, ಗೋಪಿ ಮೇಟಿ, ರಂಗಪ್ಪ ನಾಯಕ, ಜಿ.ಪಂಪಣ್ಣ ,ರವಿ ಪ್ರಕಾಶ್ ಅಕ್ಕರಿಕಿ, ವೆಂಕಟೇಶ್ ಸೋಮಕಾರ್, ರಮೇಶ ರಾಠೊಡ,ರಂಗನಾಥ ಅಬಕಾರಿ, ಮುರಿಗೆಯ್ಯ ಸ್ವಾಮಿ, ಜಾಕೀರ ಹುಸೆನ,ರಮೇಶ ನಾಯಕ, ಹಿಮಾಮಸಾಬ,ಸತೀಶ್ ಜಾಜಿ, ಗುಂಡಪ್ಪ ಅಂಜಳ, ಲಿಂಗಪ್ಪಗೌಡರು, ಶಿವು ಸಾಹುಕಾರ ಅರಿಕೇರ,ಮಲ್ಲಿಕಾರ್ಜುನ ಶಾಬಾದಿ, ಮರಿಗೆಯ್ಯ ಸ್ವಾಮಿ, ವೀರನಗೌಡ ಯಾಟಗಲ್,ಅನೀಲ್ ಕುಮಾರ ಸೋಮಕಾರ, ಶಿವು ಮಜ್ಜಿಗಿ, ನವೀನ್ ಅಕ್ಕರಿಕಿ,ಅಂಬರೇಶ ಮಡಿವಾಳ,ಮಹ್ಮದ ರಫಿ, ಇನ್ನಿತರರು ಇದ್ದರು.

ಕುರಿತು ಸುಪ್ರೀಂ ಕೋರ್ಟ್ ಆದೇಶ ಒಪ್ಪಲಾಗದು: ಸಿಪಿಐ(ಎಂ)

ಆದೇಶವು ಸಂವಿಧಾನದಲ್ಲಿ ಸ್ಪಷ್ಟಪಡಿಸಿರುವ ಮೀಸಲಾತಿ ಮತ್ತು ಇತರ ಸುರಕ್ಷತೆಗಳ ಉದ್ದೇಶವನ್ನೇ ಬುಡಮೇಲು ಮಾಡುತ್ತದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಈ ಆದೇಶವನ್ನು ಪುನರ್ ಪರಿಶೀಲಿಸಿ ಪರಿಷ್ಕರಿಸಲು ಅದನ್ನು ಸಂವಿಧಾನ ಪೀಠಕ್ಕೆ ಒಪ್ಪಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಒತ್ತಾಯಿಸಿದೆ.

ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ಜಿಲ್ಲಾಧಿಕಾರಿಗಳಿಂದ ಕಟ್ಟುನಿಟ್ಟಿನ ನಿರ್ದೇಶನ

ಏಪ್ರೀಲ್ ಮೊದಲ ವಾರದಲ್ಲಿ ರಾಯಚೂರು ಜಿಲ್ಲಾ ವ್ಯಾಪ್ತಿಯ ಎಲ್ಲ ಕೆರೆಗಳ ಭರ್ತಿಗೆ ಕ್ರಮವಹಿಸಬೇಕು



ರಾಯಚೂರು ಮಾ.25

ಮುಂಬರಲಿರುವ ಏಪ್ರೀಲ್ ಮೊದಲ ವಾರದಲ್ಲಿ ರಾಯಚೂರು ಜಿಲ್ಲೆಯ ಎಲ್ಲೆ ಕೆರೆಗಳನ್ನು ತುಂಬಿಸುವ ಕಾರ್ಯಕ್ಕೆ ಮೊದಲಾದ್ಯತೆ ನೀಡಬೇಕು ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಹೇಳಿದರು.

ರಾಯಚೂರು ಜಿಲ್ಲೆಯಲ್ಲಿ ಮುಂಬರುವ ಬೇಸಿಗೆ ಸಮಯದಲ್ಲಿ ಕುಡಿಯುವ ನೀರಿನ ಸಮಸ್ಯೆ, ಇತ್ತೀಚೆಗೆ ಸುರಿದ ಆಲಿಕಲ್ ಮಳೆಯಿಂದಾದ ಬೆಳೆಹಾನಿ ಹಾಗೂ ಮೇವು ಲಭ್ಯತೆ ಕುರಿತು, ಜಿಲ್ಲಾಧಿಕಾರಿಗಳ ಕಚೇರಿಯ ಕೆಸ್ವಾನ್ ವಿಡಿಯೋ ಸಭಾಂಗಣದಲ್ಲಿ ಮಾರ್ಚ 24ರಂದು ಸಂಜೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಯಚೂರು ಜಿಲ್ಲೆಯಲ್ಲಿ ಸಿಂಧನೂರ ತಾಲೂಕಿನಲ್ಲಿ ಅತೀ ಹೆಚ್ಚು 155 ಕೆರೆಗಳಿದ್ದು ಈ ಎಲ್ಲ ಕೆರೆಗಳನ್ನು ಭರ್ತಿ ಮಾಡಬೇಕು. ಇನ್ನುಳಿದಂತೆ ರಾಯಚೂರು ತಾಲೂಕಿನಲ್ಲಿ 15, ಮಾನವಿ ತಾಲೂಕಿನಲ್ಲಿ 18, ಅರಕೇರಾ ತಾಲೂಕಿನಲ್ಲಿ 13, ಮಸ್ಕಿ ತಾಲೂಕಿನಲ್ಲಿ 24, ಸಿರವಾರ ತಾಲೂಕಿನಲ್ಲಿ 43 ಹಾಗೂ ಲಿಂಗಸೂರ ತಾಲೂಕಿನಲ್ಲಿ 2 ಕೆರೆಗಳಿದ್ದು ಈ ಎಲ್ಲ ಕೆರೆಗಳನ್ನು ಮುಂದಿನ ತಿಂಗಳು ಜಾಗ್ರತೆಯಿಂದ ತುಂಬಿಸಬೇಕು. ಮಳೆಗಾಲದವರೆಗೆ ಮುಂದೆ ನೀರು ಸಿಗುವುದಿಲ್ಲ ಎಂದು ತಿಳಿಸಿದರು.

ಆಯಾ ತಾಲೂಕಿನ ತಹಸೀಲ್ದಾರರು, ಕಾರ್ಯ ನಿರ್ವಾಹಕ ಅಧಿಕಾರಿಗಳು ಸಹಾಯಕ ಆಯುಕ್ತರ ಸಮ್ಮುಖದಲ್ಲಿ ಒಗ್ಗೂಡಿ ಅತ್ಯಂತ ಕಾಳಜಿಯಿಂದ ಕೆರೆಗಳನ್ನು ತುಂಬಿಸಬೇಕು. ಈಗೊಂದು ವೇಳೆ ಕೆರೆ ತುಂಬಿಸದಿದ್ದಲ್ಲಿ ಜನತೆಗೆ ತೊಂದರೆಯಾಗಲಿದೆ. ಮುಂದಿನ ಜುಲೈವರೆಗೆ ಮತ್ತೆ ನೀರು ಸಿಗುವುದಿಲ್ಲ. ಏಪ್ರೀಲ್, ಮೇ ಮತ್ತು ಜೂನ್ ಮಾಹೆಯಲ್ಲಿ ಯಾವುದೇ ರೀತಿಯಲ್ಲಿ ಜನತೆಗೆ ಕುಡಿಯುವ ನೀರಿಗೆ ತೊಂದರೆಯಾಗದ ಹಾಗೆ ವ್ಯವಸ್ಥೆಯಾಗಬೇಕು.

ಬರುವ ಏಪ್ರೀಲ್ ಮೊದಲನೇ ವಾರದಲ್ಲಿ ನೀರು ಹರಿಸಲಾಗುವುದು. ಈ ವೇಳೆ ಕೆರೆಗೆ ನೀರು ತುಂಬಿಸದೇ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿ ಯಾವುದಾದರು ಗ್ರಾಮಸ್ಥರಿಗೆ ತೊಂದರೆಯಾದಲ್ಲಿ ಇದನ್ನು ಗಂಭೀರವಾಗಿ ಪರಿಗಣಿಸಲಾಗುವುದು. ಕೆರೆಗಳಿಗೆ ನೀರು ತುಂಬಿಸದೇ ಬೇಜವಾಬ್ದಾರಿ ವಹಿಸಿರುವುದು ಗೊತ್ತಾದಲ್ಲಿ ವಿಪತ್ತು ನಿರ್ವಹಣಾ ಕಾಯ್ದೆಯನುಸಾರ ಶಿಸ್ತು ಕ್ರಮಕ್ಕೆ ಶಿಫಾರಸ್ಸು ಮಾಡಲಾಗುವುದು ಎಂದು ಸಹಾಯಕ ಆಯುಕ್ತರು, ಎಲ್ಲ ತಾಲೂಕಿನ ತಹಸೀಲ್ದಾರರು, ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿಗಳು ಮತ್ತು ನೀರಾವರಿ ಇಲಾಖೆಯ ಅಧಿಕಾರಿಗಳು ಮತ್ತು ಇನ್ನಿತರ ಇಲಾಖೆಯ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಎಚ್ಚರಿಕೆ ನೀಡಿದರು.

ಹಿಂದಿನ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಬಿಸಿಲಿನ ತಾಪಮಾಣದ ಪ್ರಮಾಣ ಹೆಚ್ಚಾಗಿದೆ. ಲಿಂಗಸೂರು, ದೇವದುರ್ಗ, ರಾಯಚೂರಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಿರುವುದಾಗಿ ಕಂಡು ಬಂದಿದೆ. ಜಿಲ್ಲೆಯಲ್ಲಿ ಈಗಾಗಲೇ 35 ಹಳ್ಳಿಗಳನ್ನು ಸಮಸ್ಯಾತ್ಮಕ ಹಳ್ಳಿಗಳೆಂದು ಗುರುತಿಸಿದ್ದು ಈ ಸಂಖ್ಯೆ ಇನ್ನು ಹೆಚ್ಚಾಗುವ ಸಾಧ್ಯತೆ ಇದೆ. ಕಾಲುವೆಗಳಿಗೆ ನೀರು ಹರಿಸಲು ಇನ್ನು ಒಂದು ವಾರ ಸಮಯ ಇದ್ದು, ಅಷ್ಟರೊಳಗೆ ಸಹಾಯಕ ಆಯುಕ್ತರು, ಆಯಾ ತಾಲೂಕಿನ ಎಲ್ಲ ತಹಸೀಲ್ದಾರರು, ತಾಪಂ ಕಾರ್ಯನಿರ್ವಹಣಾಧಿಕಾರಿಗಳು ಎಲ್ಲ ಕಡೆಗೆ ಪ್ರವಾಸ ಕೈಗೊಂಡು ಖುದ್ದು ಭೇಟಿ ನೀಡಿ ನೀರಿನ ಸಮಸ್ಯೆ ಯಾವ ಕಡೆಗಿದೆ ಎಂಬುದನ್ನು ಗುರುತಿಸಿ ಅಲ್ಲಿ ನ್ಯಾಯ ವ್ಯವಸ್ಥೆಗೆ ಕ್ರಮವಹಿಸಬೇಕು. ಆಯಾ ಕಡೆಗಳಲ್ಲಿ ಕೆರೆಗಳ ನೀರಿನ ಸ್ಥಿತಿ ಹೇಗಿದೆ ಎಂಬುದರ ಬಗ್ಗೆ ವರದಿ ಸಿದ್ಧಪಡಿಸಿ ಎಲ್ಲ ಕೆರೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.

ಜಂಟಿ ಸಭೆಗೆ ಸೂಚನೆ: ಜಿಲ್ಲಾ ಉಸ್ತುವಾರಿ ಸಚಿವರು ಏಪ್ರೀಲ್ ಮೊದಲ ವಾರದಲ್ಲಿ ವಿಪತ್ತು ನಿರ್ವಹಣಾ ವಿಷಯದ ಬಗ್ಗೆ ಸಭೆ ನಡೆಸಲಿದ್ದಾರೆ. ಆ ಸಮಯದೊಳಗೆ ಕೆರೆಗಳ ಭರ್ತಿ ಸೇರಿದಂತೆ ಎಲ್ಲಾ ವ್ಯವಸ್ಥೆ ಮಾಡಬೇಕು. ಸಭೆಗೆ ಸರಿಯಾದ ಮಾಹಿತಿ ನೀಡಬೇಕು. ತಹಸೀಲ್ದಾರರು ಮತ್ತು ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು ಸಮನ್ವಯದಿಂದ ಕಾರ್ಯ ನಿರ್ವಹಿಸಬೇಕು. ಆಯಾ ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು ಎಲ್ಲ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳೊಂದಿಗೆ ಜಂಟಿ ಸಭೆ ನಡೆಸಿ ಕೆರೆಗಳ ಪರಿಸ್ಥಿತಿ, ನೀರಿನ ಸಮಸ್ಯೆ ಎದುರಿಸುವ ಹಳ್ಳಿಗಳ ವಿವರ ಸೇರಿದಂತೆ ಎಲ್ಲ ಮಾಹಿತಿಯನ್ನು ಸಂಗ್ರಹಿಸಬೇಕು ಎಂದು ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.

ಸಿರವಾರ ತಾಲೂಕಿನ ತಹಸೀಲ್ದಾರರು ಮತ್ತು ಇಓಗಳು ಹೆಚ್ಚಿನ ಕಾಳಜಿಯಿಂದ ಕೆಲಸ ಮಾಡಬೇಕು. ಸಿರವಾರ ತಾಲೂಕಿನ ಎಲ್ಲ ಹಳ್ಳಿಗಳಿಗೆ ಬೋರವೆಲ್ ಮೂಲಕವೇ ನೀರು ಪೂರೈಕೆಯಾಗುತ್ತಿದೆ ಎಂಬುದರ ಬಗ್ಗೆ ಗಮನ ಹರಿಸಿ ನೀರು ಸಿಗದ ಗ್ರಾಮಗಳಲ್ಲಿ ಖಾಸಗಿ ಬೋರವೆಲ್‌ಗಳ ಮೂಲಕ ನೀರು ಸರಬರಾಜು ಕಾರ್ಯ ಆಗಬೇಕು ಎಂದು ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.

ಬೇಸಿಗೆ ಸಮಯದಲ್ಲಿ ಎಲ್ಲ ಅಧಿಕಾರಿಗಳು ಜಾಗೃತೆಯಿಂದ ಕಾರ್ಯನಿರ್ವಹಿಸಬೇಕು. ಕುಡಿಯುವ ನೀರಿಗೆ ಸಂಬಧಿಸಿದತೆ ಯಾವುದಾದರು ಹಳ್ಳಿಗಳಲ್ಲಿ ತೊಂದರೆ ಎದುರಾದರೆ ಅಧಿಕಾರಿಗಳು ಕೂಡಲೇ ಸ್ಥಳಕ್ಕೆ ದಾವಿಸಿ ಸ್ಪಂದಿಸಿ ಸಮಸ್ಯೆಯನ್ನು ತಮ್ಮ ಹಂತದಲ್ಲೇ ಇತ್ಯರ್ಥಪಡಿಸಬೇಕು ಎಂದು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ನಿಯಮಿತ ಪರೀಕ್ಷೆ ನಡೆಸಿ: ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಈಶ್ವರ ಕಾಂದೂ ಅವರು ಮಾತನಾಡಿ, ಸಮಸ್ಯಾತ್ಮಕ ಹಳ್ಳಿಗಳಲ್ಲಿ ಖಾಸಗಿ ಬೋರವೆಲ್‌ಗಳನ್ನು ಗುರುತಿಸಿ ಕುಡಿಯುವ ನೀರು ಪೂರೈಕೆಗೆ ಅಗತ್ಯ ವ್ಯವಸ್ಥೆ ಮಾಡಬೇಕು. ರಾಯಚೂರು ಮತ್ತು ಸಿಂಧನೂರ ನಗರಸಭೆ ವ್ಯಾಪ್ತಿಯಲ್ಲಿ ಮತ್ತು ಜಿಲ್ಲಾ ವ್ಯಾಪ್ತಿಯ ಎಲ್ಲ ಹಳ್ಳಗಳಲ್ಲಿ ಪರೀಕ್ಷಿಸಿದ ಬಳಿಕವೇ ಕುಡಿಯುವ ನೀರು ಪೂರೈಸಬೇಕು. ಕುಡಿಯುವ ನೀರಿನ ಪರೀಕ್ಷೆಯನ್ನು ನಿಯಮಿತವಾಗಿ ಮಾಡಬೇಕು ಎಂದು ಅವರು ನಿರ್ದೇಶನ ನೀಡಿದರು. ದೇವದುರ್ಗ, ಸಿರವಾರ ಮತ್ತು ಮಾನವಿಗಳಲ್ಲಿ ಟಾಸ್ಕ್‌ಫೋರ್ಸ್ ಸಭೆಗೆ ಕೂಡಲೇ ವ್ಯವಸ್ಥೆ ಮಾಡಬೇಕು ಎಂದು ಸೂಚನೆ ನೀಡಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಭಜಂತ್ರಿ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಹಾಲಸಿದ್ದಪ್ಪ ಪೂಜಾರಿ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಂಧನೂರ, ಮಾನವಿ, ಮಸ್ಕಿ, ಲಿಂಗಸೂರು, ಅರಕೇರಾ, ಸಿರವಾರ, ದೇವದುರ್ಗ, ರಾಯಚೂರು ತಹಸೀಲ್ದಾರರು, ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಅಧಿಕಾರಿಗಳು ಇದ್ದರು.

ಉತ್ತರ ಕರ್ನಾಟಕದ ಮೊಟ್ಟಮೊದಲ ಎನ್-ಜೆನ್ ಅಂಚೆ ಕಚೇರಿ ಉದ್ಘಾಟನೆ

ಅಂಚೆ ಸೇವೆ ಕ್ಯಾಂಪಸ್‌ಗೆ ಮತ್ತಷ್ಟು ಹತ್ತಿರ: ಕುಲಪತಿ ಡಾ.ಎಂ.ಹನುಮತಪ್ಪ

ರಾಯಚೂರು ಮಾ.26

ಯುವ ಸಮುದಾಯವನ್ನು ಅಂಚೆ ಸೇವೆಯತ್ತ ಸೆಳೆಯಲು ಆಧುನೀಕರಣದತ್ತ ಹೆಜ್ಜೆ ಹಾಕಿರುವ ಭಾರತೀಯ ಅಂಚೆ ಇಲಾಖೆಯ ಉತ್ತರ ಕರ್ನಾಟಕದ ಮೊಟ್ಟಮೊದಲ ಎನ್-ಜೆನ್ ಅಂಚೆ ಕಚೇರಿಗೆ ರಾಯಚೂರಿನ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ.ಎಂ.ಹನುಮತಪ್ಪ ಅವರು ಮಾರ್ಚ 25ರಂದು ಚಾಲನೆ ನೀಡಿದರು.



ಈ ವೇಳೆ ಡಾ.ಎಂ.ಹನುಮತಪ್ಪ ಅವರು ಮಾತನಾಡಿ, ಇಂದಿನ ಕಾಲದಲ್ಲಿ ಕಣ್ಮರೆಯಾಗುತ್ತಿರುವ ಅಂಚೆ ಸೇವೆಗಳನ್ನು ವಿದ್ಯಾರ್ಥಿಗಳು, ಸಂಶೋಧಕರು ಮತ್ತು ಕ್ಯಾಂಪಸ್ ಸಮುದಾಯಕ್ಕೆ ಇನ್ನಷ್ಟು ಹತ್ತಿರ ತರಬೇಕಾಗಿದೆ. ಇ-ಮೇಲ್, ವಾಟ್ಸಾ ಆಪ್ ಹಾಗೂ ಎಸ್‌ಎಂಎಸ್‌ಗಳ ಯುಗದಲ್ಲಿಯುವ ಜನತೆಯನ್ನು ಆಕರ್ಷಿಸುವ ಉದ್ದೇಶದಿಂದಲೇ ಭಾರತೀಯ ಅಂಚೆಯು ವಿನೂತನ ಪ್ರಯೋಗ ಆರಂಭಿಸಿದ್ದು, ಎಲ್ಲ ವಿದ್ಯಾರ್ಥಿಗಳು ಈ ಸೇವೆಗಳನ್ನು ಪಡೆಯಬೇಕು ಎಂದರು.

ಕಚೇರಿಯು ಸ್ವಯಂ ಬುಕಿಂಗ್ ಕಿಯೋಸ್ಕ್ ಮತ್ತು ಕ್ಯೂ ಆರ್ ಕೋಡ್ ಆಧಾರಿತ ತ್ವರಿತ ಪಾವತಿ ಸೇವೆಗಳನ್ನು ಒಳಗೊಂಡಿದೆ. ಉಚಿತ ವೈಫೈ ಸೌಲಭ್ಯ, ಆರಾಮದಾಯಕ ಆಸನ ವ್ಯವಸ್ಥೆ, ಲ್ಯಾಪ್‌ಟಾಪ್ ಮತ್ತು ಮೊಬೈಲ್ ಚಾರ್ಜಿಂಗ್ ಪಾಯಿಂಟ್‌ಗಳು ಹಾಗೂ ಕಾಫಿ ವೆಂಡಿಗ್ ಯಂತ್ರ ಅಳವಡಿಸಲಾಗಿದೆ ಎಂದರು.

ಈ ವೇಳೆ ಧಾರವಾಡದ ಉತ್ತರ ಕರ್ನಾಟಕದ ಅಂಚೆ ಸೇವೆಗಳ ನಿರ್ದೇಶಕರಾದ ಶ್ರೀಹರ್ಷ ಎನ್. ಅವರು ಮಾತನಾಡಿ, 1997ರ ಮಧ್ಯದಿಂದ 2012ರ ಮೊದಲ ಭಾಗದವರೆಗೆ ಜನಿಸಿದ ಮಕ್ಕಳನ್ನು ನಾವು ಎನ್-ಜೆನ್ ಯುಗದವರು ಎಂದು ಕರೆಯಲಾಗುತ್ತದೆ. ಈ ಯುಗದಲ್ಲಿ ಹುಟ್ಟಿದ ಮಕ್ಕಳು ಜಗತ್ತಿನಲ್ಲಿ ಪ್ರಾರಂಭವಾದ ಕೌತುಕ ಮೂಡಿಸುವ ತಾಂತ್ರಿಕ ಯುಗದೊಂದಿಗೆ ಬೆಳೆದವರು. ಅದಲ್ಲದೆ ಈ ಮಕ್ಕಳು ಹೊಸ ಹೊಸ ಸಂಸ್ಕೃತಿ ಹಾಗೂ ವಿಭಿನ್ನ ಕಲೆಯನ್ನು ತಮ್ಮೊಂದಿಗೆ ಬೆಳೆಸಿಕೊಂಡು ಬರುತ್ತಿದ್ದಾರೆ. ಹೀಗಾಗಿ ಈ ಯುಗದ ಮಕ್ಕಳನ್ನು ಎನ್-ಜೆನ್ ಎಂದು ಕರೆಯುತ್ತಿದ್ದು, ವಿದ್ಯಾರ್ಥಿಗಳಿಗೆ ಬೇಕಾಗುವ ಎಲ್ಲಾ ರೀತಿಯ ಸೌಲಭ್ಯಗಳನ್ನು ಪೋಸ್ಟ್ ಆಫೀಸ್ ನಲ್ಲಿ ಇದೆ. ಇದರ ಲಾಭವನ್ನು ಪಡೆಯಬೇಕು ಎಂದರು.

ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಲೆಂಬ ಕಲ್ಪನೆಯಿಂದ ಈ ಕಚೇರಿ ಸ್ಥಾಪಿಸಲಾಗಿದೆ. ಇದು ವಿದ್ಯಾರ್ಥಿಗಳಿಂದ' ವಿದ್ಯಾರ್ಥಿಗಳಿಗಾಗಿ ಎಂಬ ಧ್ಯೇಯವಾಕ್ಯದ'ಡಿ ಕಾರ್ಯನಿರ್ವಹಿಸಲಿದೆ. ಇದು ಪಾರ್ಸೆಲ್ ಪ್ಯಾಕೇಜಿಂಗ್ ಸೇವೆಗಳನ್ನು ಸಹ ಒದಗಿಸಲಿದೆ. ವಿದ್ಯಾರ್ಥಿಗಳ ಸಮಯ ಉಳಿಸಿ, ಒತ್ತಡ ಕಡಿಮೆ ಮಾಡುತ್ತದೆ. ಅಲ್ಲದೆ, ಅಧ್ಯಯನ ಮಾಡುವ ಸ್ಥಳದಿಂದ ನೇರ ಅವರ ವಸ್ತುಗಳನ್ನು ಸಾಗಿಸಲು ಅಥವಾ ಕಳುಹಿಸಲು ಸುಲಭ ಮತ್ತು ಸುರಕ್ಷಿತ ಸ್ಥಳವಾಗಿದೆ. ಭಾರತೀಯ ಅಂಚೆಯು ದೇಶಾದ್ಯಂತ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಇಂತಹ ಎನ್-ಜೆನ್ ಅಂಚೆ ಕಚೇರಿಗಳನ್ನು ವಿಸ್ತರಿಸಲಾಗಿದೆ ಎಂದರು.

ಈ ವೇಳೆ ಧಾರವಾಡದ ಎನ್.ಕೆ. ಪ್ರದೇಶ ಸಹಾಯಕ ಪೋಸ್ಟ್‌ಮಾಸ್ಟರ್ ಜನರಲ್ (ಬಿಡಿ) ಎಚ್.ಎಂ.ಮಂಜೇಶ್ ಅವರು ಮಾತನಾಡಿ, ಕರ್ನಾಟಕದ 3ನೇ ಹಾಗೂ ಉತ್ತರ ಕರ್ನಾಟಕ ಮೊದಲ ಕಚೇರಿಯಾಗಿದೆ. ಕಲ್ಯಾಣ ಕರ್ನಾಟಕ ಭಾಗವು ಹಿಂದುಳಿದ ಪ್ರದೇಶವಾಗಿದೆ. ಇಂತಹ ಹಿಂದುಳಿದ ಪ್ರದೇಶದ ಅಭಿವೃದ್ಧಿಗಾಗಿ ನಮ್ಮ ಇಲಾಖೆಯಿಂದ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತಿದೆ ಎಂದರು.

ಯುವ ಜನಾಂಗವು ಕಚೇರಿಗೆ ಬರುವಂತೆ ಮಾಡಲು ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಅತಿಕಡಿಮೆ ಖರ್ಚಿನಲ್ಲಿ ಸೇವೆಯನ್ನು ಒದಗಿಸುತ್ತಿದೆ. ಅವುಗಳನ್ನು ಸರಿಯಾಗಿ ಬಳಸಿಕೊಳ್ಳಬೇಕು. ಅಂಚೆ ಕಚೇರಿಯಲ್ಲಿ ಬ್ಯಾಂಕ್ ವ್ಯವಹಾರ ಸಹ ಮಾಡಬಹುದಾಗಿದೆ. ಅಂಚೆ ಕಚೇರಿ ಬಗ್ಗೆ ತಿಳಿದುಕೊಳ್ಳಬೇಕು. ಕಡಿಮೆ ಬೆಲೆಯಲ್ಲಿ ದೊಡ್ಡ ಮಟ್ಟದ ಉಳಿತಾಯ ಮಾಡಬಹುದಾಗಿದೆ. ಅಲ್ಲದೆ ಉತ್ತಮ ರೀತಿಯ ಜೀವಾ ವಿಮೆ ಸೇವೆಗಳು ಸಹ ಇಲಾಖೆಯಿಂದ ಒದಗಿಸಲಾಗುತ್ತಿದ್ದು, ಸರ್ಕಾರದ ಪ್ರತಿಯೊಂದು ಯೋಜನೆ, ಸೌಲಭ್ಯಗಳನ್ನು ಚೆನ್ನಾಗಿ ಬಳಸಿಕೊಳ್ಳಬೇಕೆಂದರು.

ಈ ವೇಳೆ ಎಂ.ಎಸ್. ಅಗ್ರಿ ವಿದ್ಯಾರ್ಥಿನಿ ಯಾದ ಅಂಕಿತಾ ಅವರು ಮಾತನಾಡಿ, ಉತ್ತಮ ಗುಣಮಟ್ಟದ ಸೇವೆಗಳನ್ನು ಅಂಚೆ ಇಲಾಖೆಯಿಂದ ನೀಡಲಾಗುತ್ತದೆ. ಇಲಾಖೆಗೆ ವಿದ್ಯಾರ್ಥಿಗಳ ಸಮೂಹದಿಂದ ಇಲಾಖೆಗೆ ಅಭಿನಂದನೆಗಳು ತಿಳಿಸಲು ಸಂತೋಷವಾಗುತ್ತಿದೆ ಎಂದರು.

ಇದೇ ಸಂದರ್ಭದಲ್ಲಿ ರಾಯಚೂರು ವಿಭಾಗದ ಅಂಚೆ ಅಧೀಕ್ಷಕರಾದ ಶಿವಾನಂದ ಆರ್.ಎಚ್., ಕೃಷಿ ವಿಶ್ವವಿದ್ಯಾಲಯದ ರವಿಶಂಕರ್, ರಾಯಚೂರು ವಿಭಾಗದ ಅಂಚೆ ಇಲಾಖೆಯ ವಿಭಾಗೀಯ ಕಚೇರಿಯ ಕಚೇರಿ ಸಹಾಯಕ ಕಿರಣ್ ಕುಮಾರ್ ಜಿ., ಕಚೇರಿ ಸಹಾಯಕಿ ಹೀರಾಬಾಯಿ, ಸಹಾಯಕ ಅಂಚೆ ಅಧೀಕ್ಷಕರ ಪಿ ಚಿದಾನಂದ್, ಡಿ.ಎಂ.ಶರಣಪ್ಪ, ಅಂಚೆ ಇಲಾಖೆಯ ಶ್ರೀಪಾದ ಶಿವಂಗಿ ಸೇರಿದಂತೆ ಇತರರು ಇದ್ದರು.



ಸ್ವಾತಂತ್ರ್ಯ ಹೋರಾಟದ ಅಪ್ರತಿಮ ಸಮಾಜವಾದಿ ನಾಯಕರಾದ ಷಹೀದ್ ಭಗತ್ ಸಿಂಗ್ ರವರ 95ನೇ ಹುತಾತ್ಮ ದಿನಾಚರಣೆಯನ್ನು, ದಿನಾಂಕ 26-03-2026 ರಂದು ಗೆಜ್ಜಲಗಟ್ಟಾ ಗ್ರಾಮದಲ್ಲಿ ಅಖಿಲ ಭಾರತ ಕಿಸಾನ್ ಸಂಘಟನೆ ತಾಲೂಕ ಸಮಿತಿ ಲಿಂಗಸಗೂರು ವತಿಯಿಂದ ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ತಾಲೂಕ ಅಧ್ಯಕ್ಷರಾದ ಶರಣಪ್ಪ ಸಾಲಿ, ವಿನಯ್ ಕುಮಾರ್, ಲಚಮಪ್ಪ ಪಮಾನಕಲ್ಲೂರ, ಹನುಮಂತ ಜಲ್ಲಿ, ರಾಜಸಾಬ, ಮಂಜುನಾಥ, ಬಸಪ್ಪ, ಬಸವರಾಜ ಇಳಿಗೆರ್, ಹನುಮಂತ ಕುರ್ಡಿ, ಹುಳಗಪ್ಪ, ಮಲ್ಲಮ್ಮ, ಶಾರದಮ್ಮ, ಗ್ಯಾನಮ್ಮ, ಕನಕಮ್ಮ, ಕವಿತಾ, ನಿರ್ಮಲ ಮುಂತಾದವರು ಇದ್ದರು.

ಸಮಾಜದ ಬೇಡಿಕೆಗಳಿಗೆ ಒತ್ತಾಯಿಸಿ ಪಂಜಿನ ಮೆರವಣಿಗೆ

ನಡೆಸಲಾಯಿತು. ವಿಶ್ವಕರ್ಮ ಸಮಾಜವನ್ನು ಎಸ್ಟಿ ವರ್ಗಕ್ಕೆ ಸೇರಿಸುವುದು, ಕುಲಶಾಸ್ತ್ರ ಅಧ್ಯಯನವನ್ನು ಪುನರ್ ರಚಿಸುವುದು ಹಾಗೂ ತಿಂಥಣಿ ಶ್ರೀ ಜಗದ್ಗುರು ಮೌನೇಶ್ವರ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರ ರಚಿಸುವಂತೆ ಒತ್ತಾಯಿಸಲಾಯಿತು.

ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ಜಿಲ್ಲಾ ಅಧ್ಯಕ್ಷ ಮಾರುತಿ ಬಡಿಗೇರ್ ಅವರ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ರಾಜ್ಯ ಪ್ರಧಾನ ಕಾರ್ಯದರ್ಶಿ ಬ್ರಹ್ಮ ಗಣೇಶ್, ಸೋಮಣ್ಣ ಸುಕಾಲಪೇಟೆ, ಜಿಲ್ಲಾ ಯುವ ಅಧ್ಯಕ್ಷ ಸುರೇಶ್ ಸಂಗಾಪೂರ್, ಜಿಲ್ಲಾ ವಿಶ್ವಕರ್ಮ ಸಮಾಜದ ಅಧ್ಯಕ್ಷ ಉದಯ್ ಕುಮಾರ್ ಮಸ್ಕಿ, ಜಿಲ್ಲಾ ಗೌರವಾಧ್ಯಕ್ಷ ಮಲ್ಲಪ್ಪ ದೇವದುರ್ಗ, ಜಿಲ್ಲೆಯ ಏಳು ತಾಲೂಕಿನ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಕಾಳಿಕಾ ದೇವಸ್ಥಾನ ಅಭಿವೃದ್ಧಿ ಸಮಿತಿ ಅಧ್ಯಕ್ಷ ಎ. ಈಶ್ವರ, ವಿಶ್ವಕರ್ಮ ಕಾರ್ಪೆಂಟರ್ ಸಂಘದ ಅಧ್ಯಕ್ಷ ಬ್ರಹ್ಮಯ್ಯ, ಚಿನ್ನ-ಬೆಳ್ಳಿ ಕೆಲಸಗಾರರ ಸಂಘದ ಅಧ್ಯಕ್ಷ ವೆಂಕಟೇಶ್ ಅನ್ವರಿ, ಮೋನಪ್ಪ ವಡವಾಟಿ, ಕೆ. ಲಕ್ಷ್ಮಿಪತಿ ಯರಗೇರಾ, ಗಿರಿ ಬಾಬು, ನಾಗರಾಜ ಪತ್ತಾರ, ನರಸಪ್ಪ, ಮನೋಹರ್ ಬಡಿಗೇರ್, ವೀರೇಶ್ ಕಾರಟಗಿ, ಮೌನೇಶ ವಡವಾಟಿ, ಸುರೇಶ್ ಸಗಮಕುಂಟ, ಪ್ರಕಾಶ ನವೋದಯ ಸೇರಿದಂತೆ ಹಲವು ಮಂದಿ ಭಾಗವಹಿಸಿದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಜೆಟ್ ಅಧಿವೇಶನ ಅರ್ಥಪೂರ್ಣ ಚರ್ಚೆಗಳಿಗೆ ಒತ್ತು ನೀಡಿತೇ?



ನಾಡಿನ ಹಣೆಬರಹ ಬರೆಯುವ ಬಜೆಟ್ ಕುರಿತು ಅದಕ್ಕಾಗಿಯೇ ಮೀಸಲಿಟ್ಟ ಅಧಿವೇಶನದಲ್ಲಿ ಅರ್ಥಪೂರ್ಣ ಮತ್ತು ಆರೋಗ್ಯಕರ ಚರ್ಚೆಗಳ ಮೂಲಕ ರಾಜ್ಯದ ಅಭಿವೃದ್ಧಿಗೆ ಒತ್ತು ಕೊಡಬೇಕಾದ್ದು ಸರ್ಕಾರ ಮತ್ತು ವಿರೋಧ ಪಕ್ಷಗಳಿಬ್ಬರ ಸಹಜ ಜವಾಬ್ದಾರಿ. ಜನಪ್ರತಿನಿಧಿಗಳು ಆ ಜವಾಬ್ದಾರಿಯನ್ನು ನಿಭಾಯಿಸಿದ್ದಾರಾ?

ಬಜೆಟ್ ಮೇಲಿನ ಚರ್ಚೆಗೆ ಬುಧವಾರ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಉತ್ತರ ನೀಡಿದ್ದಾರೆ. ಅಲ್ಲಿಗೆ ಬಜೆಟ್ ಅಧಿವೇಶನದ ಕಲಾಪವನ್ನು ಸ್ಪೀಕರ್ ಖಾದರ್ ಕೊನೆಗೊಳಿಸಿದ್ದಾರೆ. ಗುರುವಾರ ನಾಮ್-ಕೆ-ವಾಸ್ತೆ ಕಲಾಪ ಮುಂದುವರೆಸಿದ್ದಾರೆ.

ಹಣಕಾಸು ಸಚಿವರೂ ಆದ ಸಿದ್ದರಾಮಯ್ಯನವರು ಮಾರ್ಚ್ 6ರಂದು ದಾಖಲೆಯ 17ನೇ ಬಜೆಟ್ ಮಂಡಿಸಿದರು. ರಾಜ್ಯದ ಆಗುಹೋಗುಗಳನ್ನು ನಿರ್ಧರಿಸುವ ಮಹತ್ವದ ಬಜೆಟ್ ಕುರಿತು ಸುದೀರ್ಘವಾಗಿ ಚರ್ಚಿಸುವ ಸಲುವಾಗಿ ಮಾ. 27ರವರೆಗೆ ಅಧಿವೇಶನ ನಡೆಸಲಾಗುವುದೆಂದು ಸ್ಪೀಕರ್ ಯು.ಟಿ. ಖಾದರ್ ತಿಳಿಸಿದ್ದರು. ಆದರೆ, ರಾಮನವಮಿ ಮತ್ತು ಉಪಚುನಾವಣೆಯ ಕಾರಣ ಮುಂದೊಡ್ಡಿ, ಒಂದು ದಿನ ಮೊಟಕುಗೊಳಿಸಿ, ಮಾ. 26ಕ್ಕೇ ಮುಕ್ತಾಯ ಹಾಡಿದ್ದಾರೆ.

ಬಜೆಟ್ ಅಧಿವೇಶನವನ್ನು ಮೊಟಕುಗೊಳಿಸುವುದು ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ವಿರುದ್ಧವಾದ ಕ್ರಮ. ಬಜೆಟ್ ಮಂಡನೆಯ ನಂತರ ನಡೆಯಬೇಕಾದ ಆಳವಾದ ವಿಶ್ಲೇಷಣೆ ಮತ್ತು ತರ್ಕಸಮ್ಮತ ಪ್ರಶ್ನೋತ್ತರಗಳು ಕಾಣಿಸಿಕೊಳ್ಳದೇ ಹೋದರೆ, ಶಾಸಕಾಂಗದ ಅಸ್ತಿತ್ವವೇ ಪ್ರಶ್ನೆಗೆ ಒಳಗಾಗುತ್ತದೆ.

ಸರ್ಕಾರವು ಅಧಿವೇಶನದ ಅವಧಿ, ಗುಣಮಟ್ಟ ಮತ್ತು ಪಾರದರ್ಶಕತೆಯನ್ನು ಬಲಪಡಿಸಬೇಕು. ಚರ್ಚೆಗೆ ಅವಕಾಶ ಕಲ್ಪಿಸುವ ಮೂಲಕ ಜನತಂತ್ರದ ಆತ್ಮವನ್ನು ಕಾಪಾಡಬೇಕು. ಆ ಮೂಲಕ ಉತ್ತಮ ಆಡಳಿತ ಸಾಧ್ಯ ಎನ್ನುವುದನ್ನು ಸಾಬೀತುಪಡಿಸಬೇಕು. ಅದರಲ್ಲೂ ಆಡಳಿತ ಪಕ್ಷ- ವಿರೋಧ ಪಕ್ಷಗಳು ಪರಸ್ಪರ ತಿಳಿವಳಿಕೆಯಿಂದ ಜನೋಪಯೋಗಿ ಚರ್ಚೆಗೆ ಮುಂದಾಗಬೇಕು. ಆದರೆ, ಈ ಬಾರಿಯ ಬಜೆಟ್ ಅಧಿವೇಶನದಲ್ಲಿ ವಿರೋಧ ಪಕ್ಷಗಳು ಪ್ರಶ್ನಿಸಿದಂತೆ ಮಾಡಿದವು; ಆಳುವ ಪಕ್ಷ ಉತ್ತರಿಸಿದಂತೆ ನಟಿಸಿತು. ಪ್ರಶ್ನೋತ್ತರಗಳಿಂದ ಸದನದ ಘನತೆ-ಗೌರವವನ್ನು ಹೆಚ್ಚಿಸಬೇಕಾದ ಜನಪ್ರತಿನಿಧಿಗಳು ಸದನವನ್ನು ಸಂತೆ ಕದನವನ್ನಾಗಿಸಿದರು. ಎದ್ದು ನಿಂತಿದ್ದು, ಕೂಗಾಡಿದ್ದು, ಹಾರಾಡಿದ್ದು ಕಡತ ಸೇರಿತು. ಮಾಧ್ಯಮಗಳಲ್ಲಿ ಪ್ರಚಾರ ಪಡೆಯುವುದಕ್ಕಷ್ಟೇ ಸೀಮಿತವಾಯಿತು.

ಬಹುತೇಕ ಸಚಿವರು, ಶಾಸಕರು, ವಿರೋಧ ಪಕ್ಷದವರು ಬಜೆಟ್ ಮೇಲಿನ ಚರ್ಚೆಗಿಂತ ಮುಖ್ಯವಾಗಿ ಉಪಚುನಾವಣೆಯ ಉಸುಕಿನಲ್ಲಿ ಸಿಕ್ಕಿಬಿದ್ದಿದ್ದರು. ಅಭ್ಯರ್ಥಿಗಳ ಆಯ್ಕೆ, ಪ್ರಚಾರ ಮತ್ತು ಗೆಲುವಿನ ಗಲಿಬಿಲಿಯಲ್ಲಿದ್ದರು. ಆಡಳಿತಾರೂಢ ಕಾಂಗ್ರೆಸ್ಸಿಗರು ಉಪಚುನಾವಣೆಗಾಗಿ; ಬಿಜೆಪಿಯವರು ರಾಮನವಮಿಗಾಗಿ ಮಹತ್ವದ ಬಜೆಟ್ ಅಧಿವೇಶನವನ್ನು ಮೊಟಕುಗೊಳಿಸುವ ಒಮ್ಮತದ ನಿರ್ಧಾರಕ್ಕೆ ಬಂದರು. ಅದಕ್ಕೆ ಸ್ಪೀಕರ್ ತಥಾಸ್ತು ಎಂದರು. ಇವರಿಗೆ ಉಪಚುನಾವಣೆ-ರಾಮನವಮಿ ಮುಖ್ಯವಾಯಿತೇ ಹೊರತು ನಾಡಿನ ಜನರ ಹಣೆಬರಹ ಬರೆಯುವ ಬಜೆಟ್ ಮುಖ್ಯವೆನಿಸಲಿಲ್ಲ, ಇರಲಿ.

ಹಾಗೆ ನೋಡಿದರೆ, ಕೆಲವು ವಿಶೇಷ ಸಂದರ್ಭಗಳಲ್ಲಿ ಅಧಿವೇಶನ ಕಡಿತಗೊಳಿಸುವುದಕ್ಕೆ ಅವಕಾಶವಿದೆ. ಕಡಿತಗೊಳಿಸುವುದಕ್ಕೆ ಸರ್ಕಾರವು ಸಮಯಾಭಾವ, ತುರ್ತು ಪರಿಸ್ಥಿತಿಗಳು ಅಥವಾ ಆಡಳಿತಾತ್ಮಕ ಕಾರಣಗಳನ್ನು ಮುಂದಿಡಬೇಕಿದೆ. ಆದರೆ, ಈ ಕಾರಣಗಳು ಜನತಂತ್ರದ ಮೂಲಭೂತ ಮೌಲ್ಯಗಳಿಗಿಂತ ಮೇಲುಗೈ ಸಾಧಿಸಬಾರದು. ಬಜೆಟ್ ಮೇಲೆ ಸಮಗ್ರ ಚರ್ಚೆ ನಡೆಯದೇ ಹೋದರೆ, ಜನಪ್ರತಿನಿಧಿಗಳು ತಮ್ಮ ಕ್ಷೇತ್ರದ ಸಮಸ್ಯೆಗಳು, ಅಗತ್ಯತೆಗಳು ಮತ್ತು ಆಕ್ಷೇಪಣೆಗಳನ್ನು ಮಂಡಿಸಲು ಅವಕಾಶ ಕಳೆದುಕೊಳ್ಳುತ್ತಾರೆ. ಇದು ಸರ್ಕಾರದ ಜವಾಬ್ದಾರಿಯನ್ನು ಕುಗ್ಗಿಸುವುದರ ಜೊತೆಗೆ, ಶಾಸಕಾಂಗದ ಪಾತ್ರವನ್ನೇ ದುರ್ಬಲಗೊಳಿಸುತ್ತದೆ.

ಪ್ರಜಾಪ್ರಭುತ್ವದಲ್ಲಿ ವಾದ-ವಿವಾದಗಳು ಕೇವಲ ರಾಜಕೀಯದ ಭಾಗವಲ್ಲ; ಅವು ನೀತಿ ನಿರೂಪಣೆಯ ಗುಣಮಟ್ಟವನ್ನು ಹೆಚ್ಚಿಸುವ ಸಾಧನಗಳಾಗಿವೆ. ಅಧಿವೇಶನವನ್ನು ಮೊಟಕುಗೊಳಿಸುವುದು ಎಂದರೆ ಪ್ರಜಾಸತ್ತಾತ್ಮಕ ಪ್ರಕ್ರಿಯೆಯನ್ನು ಕುಗ್ಗಿಸುವುದು ಎಂದರ್ಥ. ಪ್ರಜಾಪ್ರಭುತ್ವದ ಕಗ್ಗೊಲೆಗೆ ಆಳುವ-ಕೇಳುವ ಪಕ್ಷಗಳೆರಡೂ ಕೈಜೋಡಿಸಿವೆ.

ಬಜೆಟ್ ಅಧಿವೇಶನವೆಂದರೆ ಕೇವಲ ಹಣಕಾಸಿನ ಲೆಕ್ಕಾಚಾರಗಳ ಪ್ರದರ್ಶನವಲ್ಲ; ಅದು ಪ್ರಜಾಪ್ರಭುತ್ವವನ್ನು ಪರೀಕ್ಷೆಗೊಡ್ಡುವ ವೇದಿಕೆ. ಸರ್ಕಾರವು ತನ್ನ ಆದಾಯ-ವೆಚ್ಚಗಳ ವಿವರವನ್ನು ಮಂಡಿಸುವಾಗ, ಅದು ಜನತೆಗೆ ನೀಡುವ ಉತ್ತರದಾಯಿತ್ವವಾಗಿದೆ. ಬಜೆಟ್ ಅಧಿವೇಶನವು ಸರ್ಕಾರದ ಹಣಕಾಸಿನ ಶಿಸ್ತಿನ ಮೇಲೆ ಸಾರ್ವಜನಿಕ ನಿಗಾ ಸಾಧಿಸುವ ಸಾಧನವಾಗಿದೆ. ಪ್ರತಿ ಅನುದಾನ, ಪ್ರತಿ ವೆಚ್ಚದ ಬಗೆಗಿನ ಪ್ರಶ್ನೆಗಳು ಮತ್ತು ಸಮರ್ಥನೆಗಳು ತೆರಿಗೆದಾರರ ಹಣದ ಸದುಪಯೋಗವನ್ನು ಸಾರುತ್ತವೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ಬಜೆಟ್ ಅಧಿವೇಶನಗಳ ಗುಣಮಟ್ಟ; ಅವುಗಳಿಗೆ ನೀಡಲಾಗುತ್ತಿರುವ ಸಮಯ ಮತ್ತು ಚರ್ಚೆಯ ಗಂಭೀರತೆ ಎಲ್ಲವೂ ಪ್ರಶ್ನಾರ್ಹವಾಗುತ್ತಿದೆ.


ಬಜೆಟ್ ಅಧಿವೇಶನದಲ್ಲಿ ಪ್ರತಿಯೊಂದು ಅನುದಾನ, ಪ್ರತಿಯೊಂದು ಯೋಜನೆ, ಪ್ರತಿಯೊಂದು ತೆರಿಗೆ ನಿರ್ಧಾರವೂ ಮಾಪನಕ್ಕೆ ಒಳಗಾಗಬೇಕು. ಇದು ಕೇವಲ ವಿರೋಧ ಪಕ್ಷದ ಹೊಣೆಗಾರಿಕೆ ಮಾತ್ರವಲ್ಲ; ಆಡಳಿತ ಪಕ್ಷವೂ ಸಮರ್ಥನೆ ನೀಡುವ ಮೂಲಕ ಸಾರ್ವಜನಿಕ ನಂಬಿಕೆಯನ್ನು ಗಟ್ಟಿಗೊಳಿಸಬೇಕಾದ ಸಂದರ್ಭ. ಆದರೆ ವಾಸ್ತವದಲ್ಲಿ ನಡೆಯುತ್ತಿರುವುದು ಇದಕ್ಕೆ ವಿರುದ್ಧ. ಚರ್ಚೆಗೆ ಮೀಸಲಾದ ಸಮಯ ಕಡಿಮೆಯಾಗುತ್ತಿದೆ, ವಾದ-ವಿವಾದಗಳು ರಾಜಕೀಯ ಕೆಸರೆರಚಾಟಕ್ಕೆ ವ್ಯಯವಾಗುತ್ತಿವೆ. ಗಂಭೀರ ವಿಚಾರಗಳು ಗಟಾರ ಸೇರುತ್ತಿವೆ.

ಇನ್ನು ಕರ್ನಾಟಕ ವಿಧಾನಮಂಡಲದ ಬಜೆಟ್ ಅಧಿವೇಶನಕ್ಕೆ ಆಗುವ ಖರ್ಚು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಲೇ ಇದೆ. ಶಾಸಕರ ಭತ್ಯೆ, ದಿನ ಭತ್ಯೆ; ಅಧಿಕಾರಿಗಳ ಹಾಗೂ ಸಿಬ್ಬಂದಿಗಳ ವೆಚ್ಚ; ಭದ್ರತಾ ವ್ಯವಸ್ಥೆ; ಆಡಳಿತಾತ್ಮಕ ವ್ಯವಸ್ಥೆಗಳು (ವಿದ್ಯುತ್, ತಾಂತ್ರಿಕ ಸೌಲಭ್ಯಗಳು); ದಾಖಲೆ ಮುದ್ರಣ, ಭಾಷಾಂತರ, ಪ್ರಸಾರ ವ್ಯವಸ್ಥೆ ಎಲ್ಲ ಸೇರಿ ಅಂದಾಜು ದಿನವೊಂದಕ್ಕೆ 80 ಲಕ್ಷದಿಂದ 1 ಕೋಟಿಯವರೆಗೆ ಖರ್ಚಾಗುತ್ತದೆ. ಅಂದರೆ, 20 ದಿನಗಳ ಬಜೆಟ್ ಅಧಿವೇಶನಕ್ಕೆ ಸುಮಾರು 20ರಿಂದ 25 ಕೋಟಿ ರೂಪಾಯಿಗಳನ್ನು ವ್ಯಯಿಸಲಾಗುತ್ತದೆ. ಇದು ಶಾಸಕರ, ಸಚಿವರ ಸ್ವಂತದ ಹಣವಲ್ಲ. ನಾಡಿನ ಪ್ರತಿಯೊಬ್ಬ ಪ್ರಜೆಯ ತೆರಿಗೆಯ ಹಣ. ಇದರ ಸದ್ವಿನಿಯೋಗವಾಗಬೇಕಾದ್ದು ಪ್ರಜೆಗಳಿಗಲ್ಲವೇ?

ನಾಡಿನ ಹಣೆಬರಹ ಬರೆಯುವ ಬಜೆಟ್ ಕುರಿತು ಅದಕ್ಕಾಗಿಯೇ ಮೀಸಲಿಟ್ಟ ಅಧಿವೇಶನದಲ್ಲಿ ಅರ್ಥಪೂರ್ಣ ಮತ್ತು ಆರೋಗ್ಯಕರ ಚರ್ಚೆಗಳ ಮೂಲಕ ರಾಜ್ಯದ ಅಭಿವೃದ್ಧಿಗೆ ಒತ್ತು ಕೊಡಬೇಕಾದ್ದು ಸರ್ಕಾರ ಮತ್ತು ವಿರೋಧ ಪಕ್ಷಗಳಿಬ್ಬರ ಸಹಜ ಜವಾಬ್ದಾರಿ. ಜನಪ್ರತಿನಿಧಿಗಳು ಆ ಜವಾಬ್ದಾರಿಯನ್ನು ನಿಭಾಯಿಸಿದ್ದಾರೆಯೇ? ರಾಮನವಮಿ ಮತ್ತು ಉಪಚುನಾವಣೆ ಎಂಬ ಕಾರಣಗಳನ್ನು ಮುಂದಿಟ್ಟು ಅಧಿವೇಶನವನ್ನು ಮೊಟಕುಗೊಳಿಸಿದ್ದು ನಾಡಿನ ಜನತೆಗೆ ಬಗೆದ ಬಹುದೊಡ್ಡ ದ್ರೋಹವಲ್ಲವೇ?

ಅಸ್ಸಾ ಂ ವಿಧಾನಸಭಾ ಚುನಾವಣೆ: ಪಕ್ಷಾಂತರಿಗಳಿಗೆ ಪಾಠ ಕಲಿಸುತ್ತಾರೆಯೇ ಮತದಾರರು?

ಪ್ರಜಾಪ್ರಭುತ್ವದಲ್ಲಿ ಅಂತಿಮ ತೀರ್ಪುಗಾರರು ಮತದಾರರು. ತತ್ವ-ಸಿದ್ಧಾಂತಗಳನ್ನು ಬಲಿಕೊಟ್ಟು, ಕೇವಲ ಅಧಿಕಾರಕ್ಕಾಗಿ ಪಕ್ಷಾಂತರ ಮಾಡುವ ನಾಯಕರ ನಡೆಯನ್ನು ಪ್ರಜ್ಞಾವಂತ ಮತದಾರರು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ. ''ನಮ್ಮ ಮತಕ್ಕೆ ಬೆಲೆಯಿಲ್ಲವೇ? ಜನಾದೇಶವನ್ನು ಹೀಗೆ ಮಾರುಕಟ್ಟೆಯ ಸರಕಾಗಿಸುವುದು ಸರಿಯೇ?'' ಎಂಬ ಆಕ್ರೋಶ ಜನಸಾಮಾನ್ಯರಲ್ಲಿ ಮಡುಗಟ್ಟಿದೆ



ಪೂರ್ವೋತ್ತರ ಭಾರತದ ಹೆಬ್ಬಾಗಿಲು ಅಸ್ಸಾ ಂನಲ್ಲಿ ವಿಧಾನಸಭಾ ಚುನಾವಣೆಯ ಕಾವು ದಿನೇ ದಿನೇ ರಂಗೇರುತ್ತಿದೆ. 126 ಸದಸ್ಯ ಬಲದ ವಿಧಾನಸಭೆಗೆ ಏಪ್ರಿಲ್ 9 ರಂದು ನಡೆಯಲಿರುವ ಈ ಮಹತ್ವದ ರಾಜಕೀಯ ಕದನವು ಕೇವಲ ಆಡಳಿತ ಮತ್ತು ವಿರೋಧ ಪಕ್ಷಗಳ ನಡುವಿನ ಹಣಾಹಣಿಯಾಗಿ ಉಳಿದಿಲ್ಲ; ಬದಲಾಗಿ, ಇದೊಂದು ತತ್ವ-ಸಿದ್ಧಾಂತ ಹಾಗೂ ರಾಜಕೀಯ ನಿಷ್ಠೆಯ ಅಗ್ನಿಪರೀಕ್ಷೆಯಾಗಿ ಮಾರ್ಪಟ್ಟಿದೆ. ಚುನಾವಣಾ ಕಣದಲ್ಲಿನ ಅತಿರಥ-ಮಹಾರಥರ ಭವಿಷ್ಯವನ್ನು ನಿರ್ಧರಿಸಲು ರಾಜ್ಯದ ಜನತೆ ಸಜ್ಜಾಗುತ್ತಿದ್ದಾರೆ.

ಈ ಬಾರಿಯ ಚುನಾವಣೆಯ ಕೇಂದ್ರಬಿಂದುವೇ ಪಕ್ಷಾಂತರ ಪರ್ವ. ಚುನಾವಣೆ ಹತ್ತಿರವಾದಂತೆಲ್ಲಾ ಟಿಕೆಟ್ ಆಕಾಂಕ್ಷೆ, ಅಧಿಕಾರದ ಲಾಲಸೆ ಹಾಗೂ ವೈಯಕ್ತಿಕ ಹಿತಾಸಕ್ತಿಗಳಿಗಾಗಿ ನಾಯಕರು ಒಂದು ಪಕ್ಷದಿಂದ ಮತ್ತೊಂದು ಪಕ್ಷಕ್ಕೆ ಹಾರುವುದು ರಾಜಕಾರಣದಲ್ಲಿ ಸಾಮಾನ್ಯವಾಗಿದೆ. ಆದರೆ, ತಮ್ಮ ಸ್ವಾರ್ಥಕ್ಕಾಗಿ ಜನಾದೇಶವನ್ನು ಧಿಕ್ಕರಿಸುವ ಈ ಪಕ್ಷಾಂತರಿಗಳಿಗೆ ರಾಜ್ಯದ ಜನತೆ ಈ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸುತ್ತಾರೆಯೇ ಎಂಬ ಪ್ರಶ್ನೆ ಇದೀಗ ರಾಜಕೀಯ ಪಡಸಾಲೆಯಲ್ಲಿ ವ್ಯಾಪಕವಾಗಿ ಚರ್ಚೆಯಾಗುತ್ತಿದೆ.

ಅಸ್ಸಾ ಂನಲ್ಲಿ ಪಕ್ಷಾಂತರ ರಾಜಕಾರಣದ ಇತಿಹಾಸವನ್ನು ಕೆದಕಿದರೆ, ಪ್ರಸ್ತುತ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರ ನಡೆ ಪ್ರಮುಖವಾಗಿ ಗೋಚರಿಸುತ್ತದೆ. ದಶಕಗಳ ಕಾಲ ಕಾಂಗ್ರೆಸ್‌ನಲ್ಲಿದ್ದು, ಮಾಜಿ ಮುಖ್ಯಮಂತ್ರಿ ತರುಣ್ ಗೊಗೊಯ್ ಅವರ ಆಪ್ತರಾಗಿದ್ದ ಶರ್ಮಾ, 2015ರಲ್ಲಿ ತಮ್ಮ ಬೆಂಬಲಿಗರೊಂದಿಗೆ ದಿಢೀರ್ ಆಗಿ ಬಿಜೆಪಿ ಸೇರ್ಪಡೆಯಾದರು. ಅವರ ಈ ನಡೆ ಅಸ್ಸಾ ಂ ರಾಜಕಾರಣದ ದಿಕ್ಕನ್ನೇ ಬದಲಿಸಿತು ಹಾಗೂ 2021ರಲ್ಲಿ ಅವರನ್ನು ಮುಖ್ಯಮಂತ್ರಿ ಗಾದಿಗೂ ಏರಿಸುವಲ್ಲಿ ಯಶಸ್ವಿಯಾಯಿತು.

ಹಿಮಂತ ಅವರ ರಾಜಕೀಯ ಯಶಸ್ಸಿನ ಹೆಜ್ಜೆಯನ್ನೇ ಅನುಸರಿಸಿರುವ ಅನೇಕ ನಾಯಕರು ಇತ್ತೀಚಿನ ದಿನಗಳಲ್ಲಿ ಪಕ್ಷಾಂತರದ ಮೊರೆ ಹೋಗಿದ್ದಾರೆ. 2021ರ ಚುನಾವಣೆಯ ನಂತರ ಕಾಂಗ್ರೆಸ್ ಮತ್ತು ಎಐಯುಡಿಎಫ್‌ನ ಹಲವು ಶಾಸಕರು ಕಮಲ ಪಾಳಯದತ್ತ ಮುಖ ಮಾಡಿದ್ದಾರೆ.

ರೂಪ್ ಜ್ಯೋತಿ ಕೂರ್ಮಿ ಮತ್ತು ಸುಶಾಂತ್ ಬೊರ್ಗೊಹೈನ್ ಅವರಂತಹ ಪ್ರಭಾವಿ ಯುವ ನಾಯಕರು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ, ಕಾಂಗ್ರೆಸ್ ತೊರೆದು ಬಿಜೆಪಿ ಸೇರಿ, ಉಪಚುನಾವಣೆಯಲ್ಲಿ ಮತ್ತೆ ಗೆದ್ದು ಬಂದಿರುವುದು ಪಕ್ಷಾಂತರದ ಟ್ರೆಂಡ್‌ಗೆ ಮತ್ತಷ್ಟು ಇಂಬು ನೀಡಿದೆ. ಈ ಸರಣಿ ಬೆಳವಣಿಗೆಗಳು ವಿರೋಧ ಪಕ್ಷವಾದ ಕಾಂಗ್ರೆಸ್‌ಗೆ ಭಾರಿ ಹಿನ್ನಡೆಯನ್ನುಂಟು ಮಾಡಿದ್ದು, ಕಣಕ್ಕಿಳಿಸಲು ಸಮರ್ಥ ಅಭ್ಯರ್ಥಿಗಳನ್ನು ಹುಡುಕುವುದಕ್ಕಿಂತ ಹೆಚ್ಚಾಗಿ, ಇರುವ ಶಾಸಕರನ್ನು ಹಿಡಿದಿಟ್ಟುಕೊಳ್ಳುವುದೇ ದೊಡ್ಡ ಸವಾಲಾಗಿ ಪರಿಣಮಿಸಿದೆ.

ಇನ್ನೊಂದೆಡೆ, ಆಡಳಿತಾರೂಢ ಬಿಜೆಪಿ, ವಿಪಕ್ಷಗಳ ಪ್ರಬಲ ನಾಯಕರನ್ನು ಸೆಳೆಯುವ ಮೂಲಕ ವಿರೋಧ ಪಕ್ಷಗಳನ್ನು ಆಯಕಟ್ಟಿನ ಸ್ಥಳಗಳಲ್ಲೇ ದುರ್ಬಲಗೊಳಿಸುವ ತಂತ್ರಗಾರಿಕೆ ಹೆಣೆದಿದೆ. ಡಬಲ್ ಇಂಜಿನ್‌ಸರ್ಕಾರದ ಬಾಯಿ ಮಾತಿನ ಅಭಿವೃದ್ಧಿ ಮಂತ್ರವನ್ನು ಪಠಿಸುತ್ತಿರುವ ಆಡಳಿತ ಪಕ್ಷ, ಬೇರೆ ಪಕ್ಷಗಳಿಂದ ಬರುವ ನಾಯಕರಿಗೆ ಕೆಂಪು ಹಾಸು ಹಾಸಿ ಸ್ವಾಗತಿಸುತ್ತಿದೆ. ಆದರೆ, ಹೊರಗಿನಿಂದ ಬಂದವರಿಗೆ ಮಣೆ ಹಾಕುವ ಈ ನೀತಿಯು ಮೂಲ ಬಿಜೆಪಿ ಕಾರ್ಯಕರ್ತರಲ್ಲಿ ಆಗಾಗ ಅಸಮಾಧಾನದ ಹೊಗೆಯಾಡುವಂತೆಯೂ ಮಾಡಿದೆ.


ಅಸ್ಸಾ ಂ ವಿಧಾನಸಭೆಯಲ್ಲಿ ಬಹುಮತ ಸಂಖ್ಯೆ 64 ಆಗಿದ್ದು, ಈ ಗಡಿ ದಾಟಲು ಪ್ರತಿಯೊಂದು ಸ್ಥಾನವೂ ನಿರ್ಣಾಯಕ. 2021ರ ಚುನಾವಣೆಯ ಅಂಕಿ-ಅಂಶಗಳನ್ನು ಗಮನಿಸಿದರೆ, ಎನ್‌ಡಿಎ ಮೈತ್ರಿಕೂಟ 75 ಸ್ಥಾನಗಳನ್ನು ಗೆದ್ದಿದ್ದರೆ, ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟ 50 ಸ್ಥಾನಗಳಿಗೆ ತೃಪ್ತಿಪಟ್ಟಿತ್ತು. ಅಂದಿನಿಂದ ಇಂದಿನವರೆಗೆ ವಿಪಕ್ಷಗಳ ಸಂಖ್ಯಾಬಲ ಪಕ್ಷಾಂತರದಿಂದಾಗಿ ಮತ್ತಷ್ಟು ಕ್ಷೀಣಿಸಿದೆ.

ಪ್ರಜಾಪ್ರಭುತ್ವದಲ್ಲಿ ಅಂತಿಮ ತೀರ್ಪುಗಾರರು ಮತದಾರರು. ತತ್ವ-ಸಿದ್ಧಾಂತಗಳನ್ನು ಬಲಿಕೊಟ್ಟು, ಕೇವಲ ಅಧಿಕಾರಕ್ಕಾಗಿ ಪಕ್ಷಾಂತರ ಮಾಡುವ ನಾಯಕರ ನಡೆಯನ್ನು ಪ್ರಜ್ಞಾವಂತ ಮತದಾರರು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ. ''ನಮ್ಮ ಮತಕ್ಕೆ ಬೆಲೆಯಿಲ್ಲವೇ? ಜನಾದೇಶವನ್ನು ಹೀಗೆ ಮಾರುಕಟ್ಟೆಯ ಸರಕಾಗಿಸುವುದು ಸರಿಯೇ?'' ಎಂಬ ಆಕ್ರೋಶ ಜನಸಾಮಾನ್ಯರಲ್ಲಿ ಮಡುಗಟ್ಟಿದೆ. ಅವಕಾಶವಾದಿ ರಾಜಕಾರಣಕ್ಕೆ ಬ್ರೇಕ್ ಹಾಕಲು, ಪಕ್ಷಾಂತರಿಗಳಿಗೆ ಸೋಲಿನ ರುಚಿ ತೋರಿಸಲು ಜನತೆ ಚುನಾವಣೆಗಾಗಿ ಕಾಯುತ್ತಿದ್ದಾರೆ.

ಮುಂಬರುವ ಅಸ್ಸಾ ಂ ವಿಧಾನಸಭಾ ಚುನಾವಣೆಯು ಕೇವಲ ಅಭಿವೃದ್ಧಿ ಹಾಗೂ ಭರವಸೆಗಳ ಆಧಾರದ ಮೇಲಷ್ಟೇ ನಡೆಯುವುದಿಲ್ಲ; ಬದಲಾಗಿ ರಾಜಕೀಯ ನೈತಿಕತೆಯ ಒರೆಗಲ್ಲಾಗಿಯೂ ನಿಲ್ಲಲಿದೆ. ಹಿಮಂತ ಬಿಸ್ವಾ ಶರ್ಮಾ ಅವರಿಂದ ಮೊದಲ್ಗೊಂಡು ಇತ್ತೀಚಿನ ದಿನಗಳಲ್ಲಿ ಪಕ್ಷ ಬದಲಾಯಿಸಿದ ನಾಯಕರ ನಡೆಗೆ ಜನತೆ ಮನ್ನಣೆ ನೀಡಿ ಆಡಳಿತ ಪಕ್ಷವನ್ನು ಬೆಂಬಲಿಸುತ್ತಾರೋ ಅಥವಾ ಪಕ್ಷಾಂತರಿಗಳಿಗೆ ತಕ್ಕ ಪಾಠ ಕಲಿಸಿ ಹೊಸ ರಾಜಕೀಯ ಸಂದೇಶ ರವಾನಿಸುತ್ತಾರೋ ಎನ್ನುವುದನ್ನು ಕಾದು ನೋಡಬೇಕಿದೆ. ಅಂತಿಮವಾಗಿ, ಈ ಪ್ರಶ್ನೆಗೆ ಉತ್ತರ ಅಸ್ಸಾ ಂನ ಮತದಾರರ ಮತದಾನದಲ್ಲಿ ಅಡಗಿದೆ.

ಯೂರೋಪ್‌ಗೆ ಸಾಗಬೇಕಿದ್ದ ಎಲ್‌ಪಿಜಿ-ಎಲ್‌ಎನ್‌ಜಿ ಹಡಗುಗಳ ದಿಕ್ಕು ಬದಲಾವಣೆ: ಏಷ್ಯಾದತ್ತ ಮುಖಮಾಡಲು ಕಾರಣವೇನು?

ಜಾಗತಿಕ ಇಂಧನ ಸಮೀಕರಣವು ವೇಗವಾಗಿ ಬದಲಾಗುತ್ತಿದೆ. ಕೇವಲ ಎರಡು ವರ್ಷಗಳ ಹಿಂದೆ ಅನಿಲಕ್ಕಾಗಿ ಪರಿತಪಿಸುತ್ತಿದ್ದ ಯೂರೋಪ್ ಈಗ ಮಂದಗತಿಯ ಬೇಡಿಕೆಯಿಂದಾಗಿ ಹಿಂದೇಟು ಹಾಕಿದೆ. ಆದರೆ, ಏಷ್ಯಾದ ಅಭಿವೃದ್ಧಿಶೀಲ ಹಾಗೂ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಇಂಧನ ಹಸಿವು, ಯೂರೋಪ್‌ಗೆ ಹೋಗಬೇಕಿದ್ದ ಹಡಗುಗಳ ಪಾಲಿಗೆ ಹೊಸ ಸುವರ್ಣ ಮಾರುಕಟ್ಟೆಯನ್ನು ಸೃಷ್ಟಿಸಿದೆ



ಜಾಗತಿಕ ಇಂಧನ ಮಾರುಕಟ್ಟೆಯಲ್ಲಿ ಇದೀಗ ಮಹತ್ತರ ಬದಲಾವಣೆಯೊಂದು ಗೋಚರಿಸುತ್ತಿದೆ. ಯೂರೋಪ್ ರಾಷ್ಟ್ರಗಳತ್ತ ಸಾಗಬೇಕಿದ್ದ ಬೃಹತ್ ಎಲ್‌ಪಿಜಿ(ದ್ರವೀಕೃತ ಪೆಟ್ರೋಲಿಯಂ ಅನಿಲ) ಮತ್ತು ಎಲ್‌ಎನ್‌ಜಿ (ದ್ರವೀಕೃತ ನೈಸರ್ಗಿಕ ಅನಿಲ) ಹಡಗುಗಳು ದಿಢೀರನೆ ತಮ್ಮ ಗಮ್ಯ ಸ್ಥಾನವನ್ನು ಬದಲಾಯಿಸಿ ಏಷ್ಯಾ ಖಂಡದತ್ತ ಪ್ರಯಾಣ ಬೆಳೆಸುತ್ತಿವೆ. ಏಷ್ಯಾದ ಮಾರುಕಟ್ಟೆಗಳು ಯೂರೋಪ್ ದೇಶಗಳೊಂದಿಗೆ ತೀವ್ರ ಪೈಪೋಟಿ ನಡೆಸುತ್ತಿರುವುದು ಮತ್ತು ಭಾರತ, ದಕ್ಷಿಣ ಕೊರಿಯಾ, ಜಪಾನ್, ಥಾಯ್ಲೆಂಡ್, ತೈವಾನ್ ಹಾಗೂ ಬಾಂಗ್ಲಾದೇಶದಂತಹ ರಾಷ್ಟ್ರಗಳು ಆಕರ್ಷಕ ದರಗಳನ್ನು ನೀಡುತ್ತಿರುವುದೇ ಈ ಮಹತ್ವದ ಬೆಳವಣಿಗೆಗೆ ಮೂಲ ಕಾರಣವಾಗಿದೆ.

ರಷ್ಯಾ-ಉಕ್ರೇನ್ ಯುದ್ಧ ಆರಂಭವಾದ ಬಳಿಕ, ಪೈಪ್‌ಲೈನ್ ಅನಿಲ ಪೂರೈಕೆ ಕಡಿತಗೊಂಡಾಗ ಯೂರೋಪ್ ತೀವ್ರ ಇಂಧನ ಬಿಕ್ಕಟ್ಟಿಗೆ ಸಿಲುಕಿತ್ತು. ಆಗ ಜಗತ್ತಿನ ಬಹುಪಾಲು ಎಲ್‌ಎನ್‌ಜಿ ಕಾರ್ಗೋಗಳು ಯೂರೋಪ್‌ನತ್ತ ಹರಿದಿದ್ದವು. ಆದರೆ, ಪ್ರಸ್ತುತ ಸನ್ನಿವೇಶ ಬದಲಾಗಿದೆ. ಯೂರೋಪಿನಾದ್ಯಂತ ಅನಿಲ ಸಂಗ್ರಹಣಾ ಘಟಕಗಳು ಬಹುತೇಕ ಭರ್ತಿಯಾಗಿವೆ. ಕಳೆದ ಚಳಿಗಾಲದಲ್ಲಿ ಯೂರೋಪ್‌ನಲ್ಲಿ ನಿರೀಕ್ಷೆಗಿಂತ ಕಡಿಮೆ ಚಳಿ ಇದ್ದ ಕಾರಣ, ತಾಪಮಾನ ನಿರ್ವಹಣೆಗಾಗಿ ಬಳಕೆಯಾಗುವ ಅನಿಲದ ಬೇಡಿಕೆ ತೀವ್ರವಾಗಿ ಕುಸಿಯಿತು. ಜೊತೆಗೆ ಅಲ್ಲಿನ ಕೈಗಾರಿಕಾ ಚಟುವಟಿಕೆಗಳು ಕೂಡ ಸಂಪೂರ್ಣವಾಗಿ ಚೇತರಿಸಿಕೊಳ್ಳದ ಕಾರಣ ಯೂರೋಪ್‌ನ ಅನಿಲ ಮಾರುಕಟ್ಟೆಯ ಸೂಚ್ಯಂಕವಾದ ಟಿಟಿಎಫ್ ( ) ದರಗಳು ಪಾತಾಳಕ್ಕೆ ಕುಸಿದಿವೆ.

ಮತ್ತೊಂದೆಡೆ, ಅಮೆರಿಕ ಅಥವಾ ಕತಾರ್‌ನಿಂದ ಹೊರಟ ಹಡಗುಗಳ ಪೂರೈಕೆದಾರರು ಲಾಭದ ನಿರೀಕ್ಷೆಯಲ್ಲಿರುತ್ತಾರೆ. ಯೂರೋಪ್‌ನಲ್ಲಿ ಪ್ರಸ್ತುತ ಕಡಿಮೆ ಬೆಲೆ ಸಿಗುತ್ತಿರುವುದರಿಂದ, ಈ ಪೂರೈಕೆದಾರರು ತಮ್ಮ ಹಡಗಿನ ದಿಕ್ಕನ್ನು ಹೆಚ್ಚು ಲಾಭದಾಯಕವಾಗಿರುವ ಏಷ್ಯಾದತ್ತ ತಿರುಗಿಸುತ್ತಿದ್ದಾರೆ. ಇದರಿಂದಾಗಿ ಜಾಗತಿಕ ಅನಿಲ ಮಾರುಕಟ್ಟೆಯ ಸ್ಥಿತಿಗತಿಗಳು ಏಷ್ಯಾದತ್ತ ವಾಲುತ್ತಿರುವುದು ಸ್ಪಷ್ಟವಾಗಿದೆ.

ಏಷ್ಯಾ ಖಂಡವು ಇದೀಗ ಜಾಗತಿಕ ಇಂಧನ ಮಾರುಕಟ್ಟೆಯ ಹೊಸ ಕೇಂದ್ರವಾಗಿ ಹೊರಹೊಮ್ಮಿದೆ. ಯೂರೋಪ್‌ಗಿಂತ ಏಷ್ಯಾದ ಮಾರುಕಟ್ಟೆ ಸೂಚ್ಯಂಕವಾದ ಜೆಕೆಎಂ ( ) ದರವು ಪ್ರತಿ (ಮಿಲಿಯನ್ ಬ್ರಿಟಿಷ್ ಥರ್ಮಲ್ ಯುನಿಟ್) ಗೆ ಹೆಚ್ಚಿನ ಪ್ರೀಮಿಯಂ ಅನ್ನು ನೀಡುತ್ತಿದೆ. ಏಷ್ಯಾದ ವಿವಿಧ ದೇಶಗಳ ತೀವ್ರ ಪೈಪೋಟಿಯೇ ಈ ಆಕರ್ಷಕ ದರಕ್ಕೆ ಮತ್ತು ಹಡಗುಗಳ ದಿಕ್ಕು ಬದಲಾವಣೆಗೆ ಪ್ರಮುಖ ಸಾಕ್ಷಿಯಾಗಿದೆ.

ಈ ಪೈಪೋಟಿಯಲ್ಲಿ ಭಾರತ ಮುಂಚೂಣಿಯಲ್ಲಿದೆ. ಭಾರತದ ಆರ್ಥಿಕತೆ ವೇಗವಾಗಿ ಬೆಳೆಯುತ್ತಿದ್ದು, ವಿದ್ಯುತ್ ಉತ್ಪಾದನೆ, ರಸಗೊಬ್ಬರ ಕಾರ್ಖಾನೆಗಳು ಮತ್ತು ನಗರ ಅನಿಲ ವಿತರಣಾ () ವಲಯಗಳಲ್ಲಿ ನೈಸರ್ಗಿಕ ಅನಿಲದ ಬೇಡಿಕೆ ಮಿತಿಮೀರಿದೆ. ಅಲ್ಲದೆ, ಪೆಟ್ರೋಕೆಮಿಕಲ್ ಮತ್ತು ಅಡುಗೆ ಅನಿಲವಾಗಿ () ಬಳಕೆಯೂ ಗಣನೀಯವಾಗಿ ಹೆಚ್ಚಿದೆ. ಹೀಗಾಗಿ ಸ್ಪರ್ಧಾತ್ಮಕ ಬೆಲೆ ಕೊಟ್ಟು ಈ ಕಾರ್ಗೋಗಳನ್ನು ಖರೀದಿಸಲು ಭಾರತವು ಯಾವುದೇ ಹಿಂದೇಟು ಹಾಕುತ್ತಿಲ್ಲ.

ಭಾರತದ ಜೊತೆಗೆ ಇತರ ಏಷ್ಯನ್ ರಾಷ್ಟ್ರಗಳು ಕೂಡ ಈ ಓಟದಲ್ಲಿವೆ. ಜಪಾನ್ ಮತ್ತು ದಕ್ಷಿಣ ಕೊರಿಯಾ ಸಾಂಪ್ರದಾಯಿಕವಾಗಿ ವಿಶ್ವದ ಅತಿದೊಡ್ಡ ಎಲ್‌ಎನ್‌ಜಿ ಆಮದುದಾರ ರಾಷ್ಟ್ರಗಳಾಗಿದ್ದು, ತಮ್ಮ ಬೇಸಿಗೆಯ ವಿದ್ಯುತ್ ಬೇಡಿಕೆಯನ್ನು ಸರಿದೂಗಿಸಲು ಹೆಚ್ಚಿನ ಬೆಲೆ ನೀಡಲು ಸದಾ ಸಿದ್ಧವಿರುತ್ತವೆ. ಮತ್ತೊಂದೆಡೆ, ತೀವ್ರ ವಿದ್ಯುತ್ ಬಿಕ್ಕಟ್ಟನ್ನು ಎದುರಿಸುತ್ತಿರುವ ಬಾಂಗ್ಲಾದೇಶ ಮತ್ತು ಥಾಯ್ಲೆಂಡ್‌ನಂತಹ ಅಭಿವೃದ್ಧಿಶೀಲ ರಾಷ್ಟ್ರಗಳು ಅನಿಲ ಆಧಾರಿತ ವಿದ್ಯುತ್ ಸ್ಥಾವರಗಳನ್ನು ನೆಚ್ಚಿಕೊಂಡಿದ್ದು, ಯೂರೋಪ್‌ಗೆ ಹೋಗಬೇಕಿದ್ದ ಕಾರ್ಗೋಗಳನ್ನು ಹೆಚ್ಚಿನ ದರ ನೀಡಿ ತಮ್ಮತ್ತ ಸೆಳೆಯುತ್ತಿವೆ.

ಹಡಗುಗಳ ಟ್ರ್ಯಾಕಿಂಗ್ ( ) ಅಂಕಿ-ಅಂಶಗಳ ಪ್ರಕಾರ, ಜಾಗತಿಕ ಮಾರುಕಟ್ಟೆಯಲ್ಲಿ ಎಲ್‌ಎನ್‌ಜಿ ಮತ್ತು ಎಲ್‌ಪಿಜಿ ಬೆಲೆಗಳಲ್ಲಿನ ಗಮನಾರ್ಹ ವ್ಯತ್ಯಾಸವು ಈ ಬೆಳವಣಿಗೆಯ ಸ್ಪಷ್ಟ ಚಿತ್ರಣ ನೀಡುತ್ತದೆ. ಉದಾಹರಣೆಗೆ, ಯೂರೋಪ್ ಮಾರುಕಟ್ಟೆಯಲ್ಲಿ ನೈಸರ್ಗಿಕ ಅನಿಲದ ಬೆಲೆ ಪ್ರತಿ ಗೆ ಅಂದಾಜು 8 ಡಾಲರ್ ನಿಂದ 9 ಡಾಲರ್ ಆಸುಪಾಸಿನಲ್ಲಿದ್ದರೆ, ಅದೇ ಸಮಯದಲ್ಲಿ ಏಷ್ಯಾದ ಮಾರುಕಟ್ಟೆಯಲ್ಲಿ () ಇದರ ಬೆಲೆ 10 ಡಾಲರ್ ನಿಂದ 11 ಡಾಲರ್ ರಷ್ಟಿರುತ್ತದೆ. ಒಂದು ಬೃಹತ್ ಎಲ್‌ಎನ್‌ಜಿ ಹಡಗಿನಲ್ಲಿ ಲಕ್ಷಾಂತರ ಕ್ಯೂಬಿಕ್ ಮೀಟರ್ ಅನಿಲ ಇರುತ್ತದೆ. ಕೇವಲ 1 ಡಾಲರ್ ಅಥವಾ 2 ಡಾಲರ್ ಹೆಚ್ಚುವರಿ ಬೆಲೆ ಸಿಕ್ಕರೂ, ಒಂದೊಂದು ಹಡಗಿಗೆ ಪೂರೈಕೆದಾರರಿಗೆ ಮಿಲಿಯನ್ ಡಾಲರ್‌ಗಟ್ಟಲೆ ಹೆಚ್ಚುವರಿ ಲಾಭ ಸಿಗುತ್ತದೆ.

ಆಫ್ರಿಕಾದ ಗುಡ್ ಹೋಪ್ ಭೂಶಿರದ ಸುತ್ತ ಬಳಸಿ ಬರುವ ಹೆಚ್ಚುವರಿ ಸಾರಿಗೆ ವೆಚ್ಚವನ್ನು ಕಳೆದುಕೊಂಡರೂ, ಏಷ್ಯಾದ ಮಾರುಕಟ್ಟೆ ಪೂರೈಕೆದಾರರಿಗೆ ಯೂರೋಪ್‌ಗಿಂತ ಹೆಚ್ಚು ಲಾಭದಾಯಕವಾಗಿ ಪರಿಣಮಿಸಿದೆ. ಇದು ಭಾರತದ ಭವಿಷ್ಯದ ದೃಷ್ಟಿಕೋನಕ್ಕೆ ಅತ್ಯಂತ ಪೂರಕವಾಗಿದೆ. ಭಾರತವು ತನ್ನ ಒಟ್ಟಾರೆ ಇಂಧನ ಬಳಕೆಯಲ್ಲಿ ನೈಸರ್ಗಿಕ ಅನಿಲದ ಪಾಲನ್ನು ಪ್ರಸ್ತುತ ಇರುವ ಶೇ. 6 ರಿಂದ 2030 ರ ವೇಳೆಗೆ ಶೇ. 15 ಕ್ಕೆ ಹೆಚ್ಚಿಸುವ ಗುರಿ ಹೊಂದಿದೆ. ಹೀಗಾಗಿ ಕೈಗೆಟಕುವ ಆದರೆ ಸ್ಪರ್ಧಾತ್ಮಕ ದರದಲ್ಲಿ ನಿರಂತರವಾಗಿ ಇಂಧನ ಲಭ್ಯವಾಗುವುದರಿಂದ ಭಾರತದ ಕೈಗಾರಿಕಾ ಪ್ರಗತಿಗೆ ದೊಡ್ಡ ಉತ್ತೇಜನ ಸಿಕ್ಕಂತಾಗಿದೆ.

ಜಾಗತಿಕ ಇಂಧನ ಸಮೀಕರಣವು ವೇಗವಾಗಿ ಬದಲಾಗುತ್ತಿದೆ. ಕೇವಲ ಎರಡು ವರ್ಷಗಳ ಹಿಂದೆ ಅನಿಲಕ್ಕಾಗಿ ಪರಿತಪಿಸುತ್ತಿದ್ದ ಯೂರೋಪ್ ಈಗ ಮಂದಗತಿಯ ಬೇಡಿಕೆಯಿಂದಾಗಿ ಹಿಂದೇಟು ಹಾಕಿದೆ. ಆದರೆ, ಏಷ್ಯಾದ ಅಭಿವೃದ್ಧಿಶೀಲ ಹಾಗೂ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಇಂಧನ ಹಸಿವು, ಯೂರೋಪ್‌ಗೆ ಹೋಗಬೇಕಿದ್ದ ಹಡಗುಗಳ ಪಾಲಿಗೆ ಹೊಸ ಸುವರ್ಣ ಮಾರುಕಟ್ಟೆಯನ್ನು ಸೃಷ್ಟಿಸಿದೆ. ಮುಂದಿನ ದಿನಗಲ್ಲೂ ಏಷ್ಯಾದ ಈ ಆರ್ಥಿಕ ಪ್ರಾಬಲ್ಯ ಹೀಗೆಯೇ ಮುಂದುವರಿಯುವ ಎಲ್ಲಾ ಲಕ್ಷಣಗಳು ನಿಚ್ಚಳವಾಗಿವೆ.

ಬಾಗಲಕೋಟೆ ಬೈ ಎಲೆಕ್ಷನ್ ಬಿಮ್ಸ್ ಮೂಲಕ ಮತಬ್ಯಾಂಕ್ ಗಟ್ಟಿಗೊಳಿಸಿಕೊಂಡ್ರಾ ಕೈ ನಾಯಕರು

ಬಾಗಲಕೋಟೆ ಉಪಚುನಾವಣಾ ಕಣ ರಂಗೇರಿದ್ದು, ಸದ್ಯದ ಮಟ್ಟಿಗೆ ಪ್ರಚಾರ ಕಾರ್ಯದಲ್ಲಿ ಕಾಂಗ್ರೆಸ್ ಪಕ್ಷವೇ ಒಂದು ಹೆಜ್ಜೆ ಮುಂದೆ ಇರುವಂತೆ ಕಾಣುತ್ತಿದೆ. ಉಪಚುನಾವಣೆಗೆ ದಿನಾಂಕ ಘೋಷಣೆಯಾಗುವ ಕೇವಲ ಒಂದು ದಿನದ ಮೊದಲು ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ ಕೆ ಶಿವಕುಮಾರ್ ಸೇರಿ ಅರ್ಧ ಡಜನ್ ಸಚಿವರು ಬಾಗಲಕೋಟೆಗೆ ಬಂದು ಸಹಸ್ರಾರು ಜನರ ಸಮ್ಮುಖದಲ್ಲಿ ಬಿಮ್ಸ್‌ಗೆ ಶಿಲಾನ್ಯಾಸ ನೆರವೇರಿಸಿ ಹೋಗಿದ್ದರು.

ಈ ಸಭೆಯಲ್ಲಿ ಕೆಪಿಸಿಸಿ ಅಧ್ಯಕ್ಷರಾಗಿರುವ ಡಿಸಿಎಂ ಅಧಿಕೃತವಾಗಿ ಚುನಾವಣೆ ರಣಕಹಳೆ ಊದಿದರು. ದಿ. ಎಚ್ ವೈ ಮೇಟಿ ಅವರ ಕನಸಿನ ಮತ್ತು ಬಾಗಲಕೋಟೆ ಜಿಲ್ಲೆಯ ಜನರ ಬಹುದಿನಗಳ ಆಸೆಯಾದ ಸರ್ಕಾರಿ ಮೆಡಿಕಲ್ ಕಾಲೇಜು ಮಂಜೂರು ಮಾಡುವ ಮೂಲಕ ಈಡೇರಿಸಿದ್ದೇವೆ. ಮುಂಬರುವ ಮರುಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯನ್ನು ನೀವು ಗೆಲ್ಲಿಸಬೇಕು ಎಂದು ಹೇಳಿ ಕಾಂಗ್ರೆಸ್ ಪಕ್ಷಕ್ಕೆ ಜಯವಾಗಲಿ ಮೇಟಿ ಅವರಿಗೆ ಜಯವಾಗಲಿ ಎಂದು ಸಭಿಕರಿಂದ ಜೈಕಾರ ಹಾಕಿಸಿದ್ದರು.

ಅಂದು ಸಿಎಂ ಡಿಸಿಎಂ ಇಬ್ಬರೂ ಕಳೆದ 2023ರ ಚುನಾವಣೆಯಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿ ಬಿಜೆಪಿ ಬುಟ್ಟಿಗೆ ಕೈಹಾಕಿ ಗಮನಾರ್ಹ ಮತಗಳನ್ನು ಗಳಿಸಿ ಕಾಂಗ್ರೆಸ್ ಗೆಲುವಿಗೆ ಸಹಕಾರಿಯಾಗಿದ್ದ ಮಲ್ಲಿಕಾರ್ಜುನ ಚರಂತಿಮಠ ಅವರ ಮನೆಗೆ ಹೋಗಿ ಭೋಜನ ಸವಿಯುವ ಮೂಲಕ ಕಾಂಗ್ರೆಸ್ ಮತಬ್ಯಾಂಕ್ ಗಟ್ಟಿಗೊಳಿಸಿಕೊಳ್ಳುವ ತಂತ್ರಗಾರಿಕೆ ಪ್ರಯೋಗಿಸಿದರು. ಅದರ ಮರುದಿನವೇ ಬಾಗಲಕೋಟೆ ಕ್ಷೇತ್ರದ ಇನ್ನೊಬ್ಬ ಪ್ರಭಾವಿ ಲಿಂಗಾಯತ ಮುಖಂಡ ಪ್ರಕಾಶ್ ತಪಶೆಟ್ಟಿ ಅವರನ್ನು ಬಿಟಿಡಿಎ ಅಧ್ಯಕ್ಷರಾಗಿ ನೇಮಕ ಮಾಡಿದ ಆದೇಶ ಸರ್ಕಾರದಿಂದ ಪ್ರಕಟಿಸಲಾಯಿತು. ಮತ್ತೆ ಹತ್ತು ದಿನಗಳಲ್ಲೇ ಬಾಗಲಕೋಟೆಗೆ ಬಂದು ತಮ್ಮ ಪಕ್ಷದ ಅಭ್ಯರ್ಥಿಯ ನಾಮಪತ್ರ ಸಲ್ಲಿಕೆಯಲ್ಲಿ ಸಿಎಂ ಡಿಸಿಎಂ ಆದಿಯಾಗಿ ನಾಲ್ಕು ಪ್ರಭಾವಿ ಸಚಿವರು ಉಪಸ್ಥಿತರಿದ್ದು, ಸಾರ್ವಜನಿಕ ಸಮಾರಂಭದಲ್ಲಿ ಮತ್ತೊಮ್ಮೆ ಉಮೇಶ ಮೇಟಿ ಅವರ ಪರವಾಗಿ ಮತ ಯಾಚಿಸಿದರು.

ಬಿಜೆಪಿ ಪಕ್ಷದ ರಾಜ್ಯಾಧ್ಯಕ್ಷರು ಸೇರಿದಂತೆ ಹಲವು ಪ್ರಮುಖರು ಕಳೆದ ಎರಡು ವಾರಗಳಿಂದ ಬಾಗಲಕೋಟೆಗೆ ಬಂದು ಹೋಗುವ ಮೂಲಕ ತಮ್ಮ ಪಕ್ಷದ ಅಭ್ಯರ್ಥಿ ಪರವಾಗಿ ಕೆಲಸ ಮಾಡಲು ಕಾರ್ಯಕರ್ತರಲ್ಲಿ ಉತ್ಸಾಹ ತುಂಬುವ ಕೆಲಸ ಮಾಡಿದ್ದಾರೆ. ಶಿವಾಜಿ ಜಯಂತಿ ಸಮಾರಂಭ ವನ್ನು ಬಿಜೆಪಿ ಪರ ಪ್ರಚಾರಕ್ಕೆ ಬಳಸಿಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಬಿಜೆಪಿಯವರು ಕೂಡ ಪ್ರಚಾರ ಕಾರ್ಯದಲ್ಲಿ ಹಿಂದೆ ಬಿದ್ದಿಲ್ಲ. ಅವರು ಕೂಡ ಹಲವು ತಂತ್ರಗಾರಿಕೆಗಳನ್ನು ಇಲ್ಲಿ ಗೆಲುವಿಗಾಗಿ ಬಳಸಿಕೊಳ್ಳುತ್ತಿದ್ದಾರೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR